ಜನಪದ ಸೇವಾ ಟ್ರಸ್ಟ್ ಪ್ರಕಟಣೆ

ವೈಚಾರಿಕ ತಿಂಗಳ ಡೈಜೆಸ್ಟ್

ಸಂಪುಟ ೧ ಸೆಪ್ಟಂಬರ್, ೨೦೦೦ ಸಂಚಿಕೆ 2

ರಾಜಕುಮಾರರ ಅಪಹರಣ: ಒಂದು ಸಮತೋಲನ ವಿಚಾರ

ಆಯೋಡಿನ್ ಉಪ್ಪು ಯಾರ ಲಾಭಕ್ಕಾಗಿ?

ಪ್ರತಿಯೊಬ್ಬ ಮನುಷ್ಯನೂ ಪೂರ್ಣ

ಕ್ರಿಯಾತ್ಮಕ ಶಿಕ್ಷಣದ ಲಾಭಗಳು

ಮಗನಲಾಲ ಗಾಂಧೀ

ವಿಜ್ಞಾನದ ಅಸಂಗತ ಉಪಯೋಗ

★ ಈ ಸಂಚಿಕೆಯಲ್ಲಿ ★

೧. ಡಾ॥ ರಾಜ್‌ಕುಮಾರ್ ಅಪಹರಣ —ಸುರೇಂದ್ರ ಕೌಲಗಿ

ದಿನಗಳು ಕಳೆದಂತೆ ಡಾ॥ ರಾಜ್‌ಕುಮಾರರ ಬಿಡುಗಡೆ ಕ್ಲಿಷ್ಟವಾಗುತ್ತ ಹೋಗುತ್ತಿದೆ; ವೀರಪ್ಪನ್ ತನ್ನ ಕಾಡುಗಳ್ಳತನದ ವೇಷ ತೆಗೆದು ರಾಜಕಾರಣಿಯ ವೇಷ ಧರಿಸುತ್ತಿದ್ದಾನೆ. ಸರಕಾರಗಳು ನ ಪುಂ ಸ ಕ ವಾ ಗಿ ವೆ. ಜಲ್ವತ ವಿಚಾರಗಳನ್ನು ಓದಿ. ಪುಟ ೩

೨. ಆಯೋಡಿನ್‌ಉಪ್ಪು ಯಾರ ಲಾಭಕ್ಕಾಗಿ -ಎನ್. ಎನ್. ಪಣಿಕ್ಕರ್

ಒಬ್ಬ ಮನುಷ್ಯ ಇನ್ನೊಬ್ಬ ಮನುಷ್ಯನನ್ನು ಮೋಸಗೊಳಿಸುತ್ತಾನೆಂಬುದು ಎಲ್ಲರಿಗೂ ಗೊತ್ತಿರುವ ವಿಚಾರ. ಆದರೆ ಸರ್ಕಾರವೇ ಸಾರಾಸಗಟಾಗಿ ಜನತೆಯನ್ನು ಮೋಸಗೊಳಿಸುತ್ತದೆ ಎಂಬುದಕ್ಕೆ ಉದಾಹರಣೆ ಆಯೋಡಿನ್ ಉಪ್ಪನ್ನು ಬಲವಂತವಾಗಿ ತಿನಿಸುತ್ತಿರುವ ಸರ್ಕಾರದ ನೀತಿ. ಈ ಬಗ್ಗೆ ವಿವೇಚನೆ ಇದೆ ಈ ಲೇಖನದಲ್ಲಿ. ಪುಟ ೬

೩. ಪ್ರತಿಯೊಬ್ಬ ಮನುಷ್ಯನೂ ಪೂರ್ಣ. —ದಾದಾ ಧರ್ಮಾಧಿಕಾರಿ

ಗುಂಪಿನಲ್ಲಿ ಮನುಷ್ಯ ನಷ್ಟವಾಗುತ್ತಾನೆ; ಗುಂಪಿನಲ್ಲಿ ಪ್ರೇಮ ಇರದು; ಎಲ್ಲಿ ಪ್ರೇಮ ಇದೆಯೋ ಅಲ್ಲಿ ಮನುಷ್ಯನ ಪರಿಮಳ ಸೂಸುತ್ತದೆ. ಮನುಷ್ಯ ಮತ್ತು ಸಮಾಜದ ಸಂಬಂಧದ ಬಗ್ಗೆ ಹೊಸ ತಂಗಾಳಿ ಇದೆ ಈ ಲೇಖನದಲ್ಲಿ. ಪುಟ ೧೦

೪. ವಿಚಾರ ದೀಪ್ತಿ -ಡಿ.ವಿ.ಜಿ.

"ವಿಚಾರ ದೀಪ್ತಿಯು" ಮೂಲಕ ಶ್ರೇಷ್ಠ ಚಿಂತಕ ಡಿ.ವಿ.ಜಿ. ನಮ್ಮಲ್ಲಿ ಚಿಂತನೆಯ ಶಾಖ ಮೂಡಿಸಿದ್ದಾರೆ. ಪುಟ ೧೪

೫. ಕ್ರಿಯಾತ್ಮಕ ಶಿಕ್ಷಣದ ಲಾಭಗಳು -ಆಚಾರ್ಯ ಕೃಪಲಾನಿ

ಮಕ್ಕಳನ್ನು ದೊಡ್ಡಿಯಲ್ಲಿ ಕೂಡುತ್ತೇವೆ.... ಆಕರ್ಷಣಹೀನ ಅಕ್ಷರಗಳ ಪೂಜೆಗೆ ಕಿಂಚಿತ್ತೂ ಕನಿಕರವಿಲ್ಲದೆ ನೂಕುತ್ತೇವೆ. ಅವರ ಮೊದಲಿನ ಜೀವನವೆಲ್ಲಿ, ಹುಚ್ಚುಹಿಡಿಸುವ ಈ ಬದುಕೆಲ್ಲಿ? ಪುಟ ೧೯

೬. ಮಗನಲಾಲ ಗಾಂಧೀ -ವಿನೋಬಾ

ಮಗನಲಾಲ್‌ಭಾಯಿ ಗಾಂಧೀ ಗಾಂಧೀಜಿಯವರ ಆಪ್ತ ಕಾರ್ಯಕರ್ತರಲ್ಲಿ ಒಬ್ಬರಾಗಿದ್ದರು. ಖಾದಿ – ಗ್ರಾಮೋದ್ಯೋಗಗಳಿಗಾಗಿ ತಮ್ಮ ಜೀವನ ಮುಡಿಪಾಗಿಟ್ಟಿದ್ದರು. ಅವರನ್ನು ಕುರಿತ ಒಂದು ಆತ್ಮೀಯ ಪರಿಚಯ ಅವರ ನಿಕಟವರ್ತಿ ವಿನೋಬಾರಿಂದ ಇಲ್ಲಿದೆ. ಪುಟ ೨೬

೭. ವಿಜ್ಞಾನದ ಅಸಂಗತ ಉಪಯೋಗ -ಎಂ. ಆರ್. ಶ್ರೀನಿವಾಸನ್

ವಿಜ್ಞಾನಕ್ಕಾಗಿ ವಿಜ್ಞಾನ ಎಂಬ ವಿಚಾರ ಮಾನವನ ಜೀವನವನ್ನು ಅಧಃಪತನಕ್ಕೆ ತಳ್ಳುತ್ತಿದೆ. ವಿಜ್ಞಾನದ ಅಸಂಗತ ಉಪಯೋಗಕ್ಕೆ ಕಡಿವಾಣ ಹಾಕಬೇಕೆಂಬುದು ಇಂದಿನ ವೈಜ್ಞಾನಿಕ ವಿಚಾರವೂ ಕೂಡ. ಪುಟ ೩೧

ನಿಸರ್ಗದೇವಿ ಎಲ್ಲಿಹಳು ?
ಪಟ್ಟಣದ ಹತ್ತಿರ ಸುಳಿವಿಲ್ಲವೆಂದು
ಗ್ರಾಮಾಂತರಕ್ಕೆ ನಡೆದು ನೋಡಿದರೆ,
ಅವಳು ಬಿಟ್ಟಿಹ ಬೀಡು ಕಾಣಿಸುವುದೆ?
ಷಹರಿನಿಂದಾಚೆ ಎಷ್ಟು ದೂರವೋ
ಹಳ್ಳಿಪಳ್ಳಿಯಿಂದಲೂ ಆಚೆ ಅಷ್ಟೇ ದೂರ
ಆ ಮಹಾನುಭಾವೆಯ ಧಾರಾಳ ಗುಡಾರ.
ಪತಿ ಲೋಭಿಯೆಂದು ಬೆನ್ನು ತಿರುಗಿಸಿ
ಪತ್ನಿಯ ಮುಂದೆ ನಿಂತು ಕೈಯೊಡ್ಡಿದರೆ
ಭಿಕ್ಷೆ ಸಿಕ್ಕುವ ಭರವಸೆಯುಂಟೆ?
ನಿಸರ್ಗದೇವಿ ಎಲ್ಲಿಹಳಯ್ಯ?
ಬೇರೆ ಎಲ್ಲೂ ಅವಳಿಲ್ಲ, ರಂಗಯ್ಯ :
ಎಲ್ಲಿ ಅಕುಟಿಲ ಚಿತ್ತ ಇರುವುದೋ ಅಲ್ಲಿ
ಮನೆ ಮಾಡಿಹಳು ನಿಸರ್ಗದೇವಿ

—ಎಸ್. ವಿ. ರಂಗಣ್ಣ

ಜನಪದ ವಿಚಾರ

ವೈಚಾರಿಕ ತಿಂಗಳ ಡೈಜೆಸ್ಟ್

ಸಂಪುಟ : ೧ ಸಂಚಿಕೆ : ೨

ಸೆಪ್ಟೆಂಬರ್ ೨೦೦೦

ಸಂಪಾದಕ

ಸುರೇಂದ್ರ ಕೌಲಗಿ

ಸಲಹಾ ಸಮಿತಿ,
ಜನಪದ ಸೇವಾ ಟ್ರಸ್ಟ್
ಧರ್ಮದರ್ಶಿ ಮಂಡಳಿ

....

ಚಂದಾ ವಿವರ :
ವಾರ್ಷಿಕ : ರೂ. ೧೦೦/-
ಅರ್ಧವಾರ್ಷಿಕ ರೂ ೫೦/-
ಬಿಡಿ ಸಂಚಿಕೆ : ರೂ. ೧೦/-

ಸಂಪರ್ಕ ವಿಳಾಸ :
ಜನಪದ ಸೇವಾ ಟ್ರಸ್ಟ್ (ರಿ.)
ಕಲ್ಯಾಣಿ ಬೀದಿ,
ಮೇಲುಕೋಟೆ
ಜಿಲ್ಲಾ : ಮಂಡ್ಯ. ೫೭೧ ೪೩೧.
ದೂರವಾಣಿ : ೦೮೨೩೬/೫೮೭೫೪

ಜನಪದ ಸಂಗತಿ....................

ಕಳೆದ ಆಗಸ್ಟ್ ಮಾಹೆ ಉಳಿದೆಲ್ಲ ತಿಂಗಳುಗಳಿಗಿಂತ ಹೆಚ್ಚು ವಿಶೇಷತೆಗಳನ್ನು ಹೊಂದಿದೆ. ಪ್ರಪಂಚದ ಅನೇಕ ಮಹತ್ವದ ಐತಿಹಾಸಿಕ ಘಟನೆಗಳು ಈ ತಿಂಗಳಲ್ಲಿಯೇ ನಡೆದಿವೆ; ಅಲ್ಲದೆ ಪ್ರಪಂಚದ ಅನೇಕ ದೊಡ್ಡ ವ್ಯಕ್ತಿಗಳ ಜನ್ಮವೂ ಇದೇ ತಿಂಗಳು ಆಗಿದೆ. ಭಾರತದ ಮಟ್ಟಿಗೆ ಹೇಳುವುದಾದರೆ ಇದೇ ತಿಂಗಳು ೯ ನೇ ತಾರೀಖು ೧೯೪೨ ನೇ ಇಸ್ವಿಯಲ್ಲಿ "ಭಾರತ ಬಿಟ್ಟು ತೊಲಗಿ" ಎಂಬ ಘೋಷಣೆ ಎಲ್ಲೆಲ್ಲೂ ಮಾರ್ದನಿಗೊಂಡು ಇಂಗ್ಲೀಷರ ಆಡಳಿತದ ಬೇರು ಸಡಿಲಗೊಂಡವು. ಇದೇ ತಿಂಗಳಲ್ಲಿಯೇ ೧೯೪೭ ರಲ್ಲಿ ಭಾರತ ದೇಶ ತನ್ನ ದೀರ್ಘ ಕಾಲದ ದಾಸ್ಯತೆಯಿಂದ ವಿಮೋಚನೆ ಪಡೆಯಿತು. ಈಗ ಇದೇ ತಿಂಗಳಲ್ಲಿ ಭಾರತದಲ್ಲಿ ಮೂರು ಹೊಸ ರಾಜ್ಯಗಳ ಸೃಷ್ಟಿಗೆ : ಉತ್ತರಾಂಚಲ, ಝಾರಖಂಡ ಮತ್ತು ಛತ್ತೀಸಗಡ : ರಾಜ್ಯಗಳ ಉದಯಕ್ಕೆ ಲೋಕಸಭೆ ನಾಂದಿಯನ್ನು ಹಾಡಿದೆ. ಹೆಚ್ಚು ಕಡಿಮೆ ಇದೇ ತಿಂಗಳ ಪ್ರಾರಂಭದಲ್ಲಿಯೇ ಕನ್ನಡದ ವರನಟ ಡಾ॥ ರಾಜ್‌ಕುಮಾರ್ ಅವರ ಅಪಹರಣವಾಗಿ ಇಡೀ ಕರ್ನಾಟಕ ದುಃಖ-ವ್ಯಥೆ-ಆತಂಕಗಳ ಕರಾಳ ಛಾಯೆಯಲ್ಲಿ ತನ್ನ ಬದುಕನ್ನು ನೂಕಬೇಕಾಗಿ ಬಂತು ಮತ್ತು ಆ ವೇದನೆ ಇನ್ನೂ ಮುಂಬರಿಯುತ್ತಿದೆ. ರಾಷ್ಟ್ರ ಮಟ್ಟದಲ್ಲಿಯೂ ಕೆಲ ಅಪಾಯಕಾರಿ ಘಟನೆಗಳು ನಡೆದವು. ಕಾಶ್ಮೀರ ಸಮಸ್ಯೆಯ ಪರಿಹಾರಕ್ಕೆ ಏಕಪಕ್ಷೀಯವಾಗಿ ಹಿಂಸೆಯ ನಿಲುಗಡೆಯನ್ನು ಘೋಷಿಸಿದ ಹಿಜಬುಲ್ ಭಯೋತ್ಪಾದಕ ಸಂಘಟನೆಯು ಮಾತುಕತೆಗೆಸಂಬಂಧಿಸಿದ ಕರಾರುಗಳನ್ನು ಭಾರತ ಸರ್ಕಾರ ಒಪ್ಪಲಿಲ್ಲವೆಂದು ಪುನಃ ಭಯೋತ್ಪಾದನೆ, ಹಿಂಸಾಚಾರಕ್ಕೆ ತೊಡಗಿ ೧೦೦ಕ್ಕೂ ಹೆಚ್ಚು ಅಮರನಾಥ ಯಾತ್ರಿಗಳ ಹತ್ಯೆಗೂ ಶ್ರೀನಗರದಲ್ಲಿ ಬಾಂಬ್ ಸ್ಫೋಟಿಸಿ ೯ ಜನರ ಹತ್ಯೆಗೂ ಕಾರಣವಾಯಿತಲ್ಲದೆ ಕಾಶ್ಮೀರ ಮತ್ತು ಇತರ ಮಿಲಿಟರಿ ಸ್ಥಾನಗಳಲ್ಲಿ ಅತಿಯಾದ ಹಿಂಸಾಚಾರಕ್ಕೆ ಇಳಿಯುವುದಾಗಿಯೂ ಬೆ ದ ರಿ ಕೆ ಹಾಕಿದೆ. ಇದೆಲ್ಲವೂ ಸಾಲದೆಂಬಂತೆ ಬಿಹಾರ್, ಆಸ್ಸಾಂ ಮತ್ತು ಉತ್ತರ ಭಾರತದ ಇತರ ಕೆಲ ರಾಜ್ಯಗಳಲ್ಲಿ ಪ್ರವಾಹದ ಹಾವಳಿ ಉಂಟಾಗಿ ಲಕ್ಷಾಂತರ ಜನ ತಮ್ಮ ಮನೆ-ಮಠ ಕಳೆದುಕೊಂಡಿದ್ದಾರೆ. ಈ ಘಟನೆಗಳ ಹಿನ್ನೆಲೆಯಲ್ಲಿ ಸಾಮಾನ್ಯ ಜನರ ನಿಃಸಹಾಯಕತೆ ಎದ್ದು ಕಾಣುತ್ತಿದೆ.

–ಸುರೇಂದ್ರ ಕೌಲಗಿ

ಡಾ|| ರಾಜಕುಮಾರರ ಅಪಹರಣ :
ಒಂದು ಸಮತೋಲಿತ ವಿಚಾರ

ಡಾ|| ರಾಜಕುಮಾರರ ಅಪಹರಣ ಎಲ್ಲ ಜನರ ಭಾವನೆಯನ್ನು ಕೆರಳಿಸಿದೆ. ಈ ಘಟನೆಯ ಬಗ್ಗೆ ಎಲ್ಲರೂ ಅವರವರ ಭಾವಕ್ಕೆ ತಕ್ಕಂತೆ ಯೋಚಿಸುತ್ತಿದ್ದಾರೆ. ಮನುಷ್ಯನ ಜೀವನದಲ್ಲಿ ಘಟಿಸುವ ಯಾವುದೇ ಘಟನೆಯ ಬಗ್ಗೆ ಅವನು ಪ್ರಾರಂಭದಲ್ಲಿ ಭಾವನಾತ್ಮಕವಾಗಿಯೇ ಪ್ರತಿಕ್ರಿಯಿಸುತ್ತಾನೆ. ಕಾಲ ಉರುಳಿದಂತೆ ಮತ್ತು ವಸ್ತುಸ್ಥಿತಿಯ ಅರಿವಾಗುತ್ತ ಹೋದಂತೆ ಆ ಘಟನೆಯ ನಗ್ನಚಿತ್ರ ಅವನ ಒಳಗಣ್ಣಿಗೆ ತೋರುತ್ತದೆ. ಆಗ ಅವನು ಪ್ರಾರಂಭದಲ್ಲಿ ಆ ಘಟನೆಯ ಬಗ್ಗೆ ಪ್ರತಿಕ್ರಿಯಿಸಿದ ರೀತಿ, ಆಡಿದ ಮಾತು, ಮಾಡಿದ ಕೆಲಸ ಇವು ಎಷ್ಟು ಸರಿ, ಎಷ್ಟು ತಪ್ಪು ಎಂಬುದರ ವಿಶ್ಲೇಷಣೆ ಅವನ ಮನದಾಳದಲ್ಲಿ ಪ್ರಾರಂಭವಾಗುತ್ತದೆ. ಒಟ್ಟಿನಲ್ಲಿ ಭಾವನಾತ್ಮಕ ಪ್ರತಿಕ್ರಿಯೆ ಸಮಸ್ಯೆಯ ಪರಿಹಾರದತ್ತ ಮನುಷ್ಯನನ್ನು ಬಹು ದೂರ ಕರೆದುಕೊಂಡು ಹೋಗಲಾರದು.

ಡಾ|| ರಾಜಕುಮಾರ್ ಓರ್ವ ವರನಟ; ಕನ್ನಡ ರಂಗಭೂಮಿಗೆ ಮತ್ತು ಚಿತ್ರರಂಗಕ್ಕೆ ಹಾಗೂ ಕನ್ನಡ ಭಾಷಾ ಪ್ರೇಮಕ್ಕೆ ಅವರು ಕೊಟ್ಟ ಕಾಣಿಕೆ ಅಪಾರ. ಬಹಳ ಸಾಮಾನ್ಯನಾಗಿದ್ದ ವ್ಯಕ್ತಿ ತನ್ನ ಸ್ವಪ್ರತಿಭೆಯಿಂದ ಅಸಾಮಾನ್ಯರಾದರು. ಕನ್ನಡಿಗರೆಲ್ಲರ ಕಣ್ಮಣಿ ಎನಿಸಿರುವ ಡಾ|| ರಾಜ್‌ಕುಮಾರರ ಅಪಹರಣ ಎಲ್ಲರಿಗೂ ಆಘಾತವನ್ನುಂಟುಮಾಡಿರುವುದರಲ್ಲಿ ಸಂದೇಹವಿಲ್ಲ.

ರಾಜ್‌ಕುಮಾರರ ಅಪಹರಣವಾಗಿ ಈ ಲೇಖನ ಬರೆಯುವ ಹೊತ್ತಿಗೆ ಇಪ್ಪತ್ತೈದು ದಿನಗಳಾದವು. ಆದರೂ ಕೂಡ ಅವರ ಬಿಡುಗಡೆಯ ಸುಳಿವು ಇಲ್ಲ. ಕಾಲ ಕಳೆದಂತೆ ಸಮಸ್ಯೆ ಕ್ಲಿಷ್ಟವಾಗುತ್ತ ಹೋಗುತ್ತಿದೆ. ಜನರಲ್ಲಿ ರಾಜ್‌ರ ಆರೋಗ್ಯದ ಬಗ್ಗೆ ಆತಂಕ, ಚಿಂತೆ ಹೆಚ್ಚಾಗುತ್ತಿದೆ. ಕರ್ನಾಟಕ ಮತ್ತು ತಮಿಳುನಾಡು ಸರ್ಕಾರಗಳು ಸಹ ಇಕ್ಕಟ್ಟಿಗೆ ಸಿಕ್ಕಿವೆ, ದಾರಿಗಾಣದಾಗಿವೆ.

ರಾಜ್ ಬಿಡುಗಡೆಯ ವಿಷಯದಲ್ಲಿ ಮೊಟ್ಟಮೊದಲು ಬರುವ ಆಲೋಚನೆ ಅವರ ಸುರಕ್ಷತತೆ. ಅವರಿಗೆ ಮತ್ತು ಅವರೊಂದಿಗೆ ಅಪಹರಣಕ್ಕೊಳಗಾದ ಇತರರಿಗೆ ಯಾವುದೇ ಪ್ರಾಣಾಪಾಯವಾಗದಂತೆ ಅವರನ್ನು ಕಾಡುಗಳ್ಳನಿಂದ ಬಿಡಿಸಿಕೊಂಡು ಬರುವ ಮಾರ್ಗ ಯಾವುದು ಎಂಬುದೇ ಪ್ರಮುಖ ಚಿಂತೆ. ಈ ಚಿಂತೆಯ ಕಾರಣದಿಂದ ಎರಡು ರಾಜ್ಯ ಸರ್ಕಾರಗಳೂ ಯಾವುದೇ ಉಗ್ರಕ್ರಮ ಕೈಗೊಳ್ಳಲು ಹಿಂಜರಿಯುತ್ತಿವೆ.

ಇಂಥ ಪರಿಸ್ಥಿತಿಯ ಹಿನ್ನೆಲೆಯಲ್ಲಿ ಭಾವನಾರಹಿತವಾಗಿ ತಣ್ಣಗಿನ ಮನೋಭಾವದಿಂದ ರಾಜ್‌ರ ಅಪಹರಣದ ಘಟನೆಯ ಆಗುಹೋಗುಗಳ ಬಗ್ಗೆ ಆಲೋಚಿಸುವುದು ಎಲ್ಲರ ಕರ್ತವ್ಯ.

ರಾಜ್ ಅಪಹರಣವಾದ ಸುದ್ದಿ ನಮ್ಮ ರಾಜ್ಯದ ಮುಖ್ಯ ಮಂತ್ರಿಯವರಿಗೆ ತಿಳಿದಾಗ ಬಹುಶಃ ರಾತ್ರಿ ೧೧ ಗಂಟೆ. ಇಂಥ ಹೃದಯಘಾತಕ ಸುದ್ದಿ ತಿಳಿದ ತಕ್ಷಣ ಒಂದು ರಾಜ್ಯದ ಮುಖ್ಯಮಂತ್ರಿಯಾಗಲೀ, ಸರ್ಕಾರವಾಗಲೀ ಕೈಗೊಳ್ಳಬೇಕಾದ ಮೊಟ್ಟಮೊದಲ ಕ್ರಮ ಪೋಲಿಸ್ ಕಾರ್ಯಾಚರಣೆ. ಇದು ಯಾವುದೇ ಸರ್ಕಾರದ ಆದ್ಯ ಕರ್ತವ್ಯ ಮತ್ತು ಸ್ವಧರ್ಮವೂ ಕೂಡ. ಈ ಕಾರ್ಯಾಚರಣೆಯ ಫಲಾಫಲ, ಎರಡನೇ ಮಾತು. ತನ್ನ ಗೌರವಾನ್ವಿತ ಪ್ರಜೆಯ ರಕ್ಷಣೆಗಾಗಿ ಸರ್ಕಾರವೆಂದು ಕರೆಯಲ್ಪಡುವ ರಾಜ್ಯಶಕ್ತಿಯ ಪ್ರಥಮ ಮತ್ತು ತುರ್ತು ಕ್ರಿಯೆ ಪೋಲಿಸ್ ಕಾರ್ಯಾಚರಣೆ. ರಾತ್ರಿ ೧೧ ಗಂಟೆಯಿಂದ ಬೆಳಗಿನ ೧೦ ಗಂಟೆಯವರೆಗೆ ಕಾಡುಗಳ್ಳ ತನ್ನ ಬೇಟೆಯೊಂದಿಗೆ ಇನ್ನೂ ಕಾಡಿನ ಅಂಚಿನಲ್ಲಿಯೇ ಮೈ ಮರೆತು ಕುಳಿತಿದ್ದಾಗ ಕರ್ನಾಟಕ ಸರ್ಕಾರ ತನ್ನ ಎಲ್ಲ ನಿಗೂಢ ಮಂತ್ರ – ತಂತ್ರಗಳೊಂದಿಗೆ ಕಾರ್ಯಾಚರಣೆ ಮಾಡಿದ್ದರೆ ರಾಜ್‌ರವರನ್ನು ಬಹಳ ಸುಲಭವಾಗಿ ಬಿಡಿಸಿಕೊಳ್ಳಬಹುದಾಗಿತ್ತು, ಮತ್ತು ಆ ಆ ಕಾಡುಗಳ್ಳನನ್ನು ಜೀವ ಸಮೇತ ಹಿಡಿದು ಅವನ ನಲ್ವತ್ತು ವರ್ಷಗಳ ಪುಂಡಾಟಿಕೆ ಕೊನೆ ಹೇಳಬಹುದಿತ್ತು. ನಮ್ಮ ರಾಜ್ಯಶಾಸ್ತ್ರ ಹೇಳುವಂತೆ ಆಡಳಿತಗಾರರ ಹೃದಯ ದೀನರ ಬಗ್ಗೆ ಕೋಮಲವಾದ ಹೂವಿನಂತೆಯೂ, ದುಷ್ಟರ ಬಗ್ಗೆ ವಜ್ರದಂತೆ ಕಠಿಣವಾಗಿಯೂ ಇರಬೇಕೆಂಬ ನೀತಿಯನ್ನು ನಮ್ಮ ಸರ್ಕಾರ ಅನುಸರಿಸುವುದರಲ್ಲಿ ಪೂರ್ಣ ವಿಫಲವಾದುದರ ಪರಿಣಾಮವಾಗಿ ಮತ್ತು ಸಮಯಕ್ಕೆ ತಕ್ಕಂಥ ತೀರ್ಮಾನವನ್ನು ಕೈಗೊಳ್ಳುವುದರಲ್ಲಿ ತಪ್ಪಿದುದರ ಪರಿಣಾಮವಾಗಿ ಇಂದು ರಾಜಕುಮಾರರು ಕಠಿಣ ಅರಣ್ಯವಾಸದ ಶಿಕ್ಷೆಯನ್ನು ಅನುಭವಿಸಬೇಕಾಗಿ ಬಂದಿದೆ. ಅಲ್ಲದೆ, ಈ ಕಾರಣದಿಂದಾಗಿ ಜನರು ಎಲ್ಲಿ ದೊಂಬಿಯೇಳುತ್ತಾರೋ ಎಂಬ ಭಯದ ಕಾರಣದಿಂದ ರಾಜ್ಯದಲ್ಲಿರುವ ಎಲ್ಲ ಶಾಲಾ-ಕಾಲೇಜ್‌ಗಳಿಗೆ ಸುಮಾರು ಎರಡು ವಾರ ರಜೆ ಬಂದು ಲಕ್ಷಾಂತರ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ಅಡಚಣೆ ಉಂಟಾಯಿತು. ಇಂಥ ಮುಜಗರದ ಪರಿಸ್ಥಿತಿಯನ್ನು ಸ್ವಾತಂತ್ರ್ಯ ಚಳುವಳಿಯ ಕಾಲದಲ್ಲಿಯೂ ವಿದ್ಯಾರ್ಥಿಗಳು, ತಂದೆ-ತಾಯಿಗಳು ಅನುಭವಿಸಿರಲಿಲ್ಲ. ಇದು ಸರ್ಕಾರದ ದೌರ್ಬಲ್ಯವನ್ನು ತೋರಿಸುತ್ತದೆ.

ಅಪಹರಣವಾದಾಗಿನಿಂದ ಕರ್ನಾಟಕ ಸರ್ಕಾರ ಕಾಡುಗಳ್ಳನ ಬೇಡಿಕೆಗಳನ್ನು

ತಿಳಿಯಲು ಪ್ರಯತ್ನಿಸುತ್ತಾ, ಆ ಬೇಡಿಕೆಗಳ ಈಡೇರಿಕೆ ಸಾಧ್ಯಾಸಾಧ್ಯತೆಯನ್ನು ಅವನಿಗೆ ತಿಳಿಸುತ್ತಾ ಕಾಲ ಕಳೆಯುತ್ತಿದೆ. ಕಾಡುಗಳ್ಳನ ಬೇಡಿಕೆಗಳಿಗೆ ಹೊಸ ತಿರುವು ಬಂದಿದೆ. ತನ್ನ ಸ್ವಹಿತಕ್ಕೆ ಸಂಬಂಧಿಸಿದ ಬೇಡಿಕೆಗಳ ಬದಲಾಗಿ ತಮಿಳು ನಾಡಿನ ಹಿತರಕ್ಷಣೆಯ ಮಾತನಾಡುತ್ತ ತಾನೊಬ್ಬ ಆ ರಾಜ್ಯದ "ದೈವೀ ಪುರುಷ" ನಾಗಲು ಪ್ರಯತ್ನಸುತ್ತಿದ್ದಾನೆ. ಭೌತಿಕ ಬೇಡಿಕೆಗಳ ಬದಲಾಗಿ ಭಾವನಾತ್ಮಕ ಬೇಡಿಕೆಗಳನ್ನು ಮಂಡಿಸುತ್ತಿದ್ದಾನೆ. ಯಾವುದೇ ಸರ್ಕಾರಕ್ಕೆ ಭೌತಿಕ ಬೇಡಿಕೆ ಗಳನ್ನು ಈಡೇರಿಸುವುದು ಸುಲಭ; ಭಾವನಾತ್ಮಕ ಬೇಡಿಕೆಗಳ ಈಡೇರಿಕೆ ಕಷ್ಟ. ಇದರಿಂದಾಗಿ ರಾಜಕುಮಾರರ ಬಿಡುಗಡೆಯ ಸಾಧ್ಯತೆ ಒಂದು ಮರೀಚಿಕೆಯಾಗಿ ಪರಿಣಮಿಸುತ್ತಿದೆ; ಕಾಲ ಮತ್ತು ಪರಿಸ್ಥಿತಿ ಸರ್ಕಾರಗಳ ಕೈಯಿಂದ ಜಾರಿ ಹೋಗುವ ಭಯ ಉಂಟಾಗುತ್ತಿದೆ. ಆದ್ದರಿಂದ ಕರ್ನಾಟಕ ಸರ್ಕಾರ ಕಾಡುಗಳ್ಳನ ಬೇಡಿಕೆ ಗಳ ಬಗ್ಗೆ ತಲೆಕೆಡಿಸಿಕೊಳ್ಳದೆ ತಾನೇ ಅವನಿಗೆ ಕ್ಷಮಾದಾನ, ಧನಸಹಾಯ, ಅವನ ಮಕ್ಕಳ ಆರೋಗ್ಯ ಮತ್ತು ವಿದ್ಯಾಭ್ಯಾಸ, ಮನೆಕಟ್ಟಿ ಕೊಡುವುದು, ವ್ಯವಸಾಯ ಕ್ಕಾಗಿ ಭೂಮಿ ಇತ್ಯಾದಿ ಮಾನವೀಯ ಸಹಾಯದ ಭರವಸೆಯನ್ನು ಕೊಟ್ಟು ಒಂದು ಅವಧಿಯೊಳಗಾಗಿ ರಾಜಕುಮಾರರ ಬಿಡುಗಡೆ ಮಾಡದಿದ್ದರೆ ಮುಂದೆ ಎರಡೂ ರಾಜ್ಯಗಳಲ್ಲಿ ಉಂಟಾಗಬಹುದಾದ ಎಲ್ಲ ಪ್ರಕಾರದ ಘಟನೆಗಳಿಗೆ ಅವನೇ ಕಾರಣನಾಗುವನೆಂದು ಕಾಡುಗಳ್ಳನಿಗೆ ತಿಳಿಸಬೇಕು ಮತ್ತು ಅದಕ್ಕೆ ಅವನು ತಲೆ ಬಾಗದಿದ್ದರೆ ಎಲ್ಲ ಬುದ್ಧಿವಂತಿಕೆಯಿಂದ ಅವನ ಬಿಡಾರದ ಮೇಲೆ ದಾಳಿ ಮಾಡಿ ರಾಜಕುಮಾರರನ್ನು ಸುರಕ್ಷಿತವಾಗಿ ಬಿಡಿಸಿಕೊಳ್ಳಬೇಕು ಮತ್ತು ಕಾಡುಗಳನನ್ನು ಬಂಧಿಸಬೇಕು.

ಇಲ್ಲಿ ಇನ್ನೊಂದು ಸಂಗತಿ ಅನಾವರಣಗೊಳ್ಳುತ್ತದೆ; ಅದು ಯಾಥಾ ಪ್ರಕಾರ ರಾಜಕಾರಣದ ಮಾತು. ಎರಡೂ ರಾಜ್ಯಗಳ ಮುಖ್ಯಮಂತ್ರಿಗಳಿಗೆ ಕಠೋರ ಕಾರ್ಯಾಚರಣೆ ಮಾಡಿ ಬಂದಿರುವ ಬಿಕ್ಕಟ್ಟನ್ನು ಪರಿಹರಿಸುವ ಯೋಚನೆಗಿಂತ ಅವರವರ ಅಧಿಕಾರದ ಖುರ್ಚಿಯನ್ನು ಉಳಿಸಿಕೊಳ್ಳುವ ಚಿಂತೆ ಹೆಚ್ಚಾಗಿದೆ. "ಹಾವೂ ಸಾಯಬಾರದು, ಕೋಲೂ ಮುರಿಯಬಾರದು" ಎಂಬ ನೀತಿಯನ್ನು ಅವರು ಅನುಸರಿಸುತ್ತಿದ್ದಾರೆ. ಉಗ್ರ ಕಾರ್ಯಾಚರಣೆಯ ಸಂದರ್ಭದಲ್ಲಿ ರಾಜ್ ಕುಮಾರರಿಗೆ ಏನಾದರೂ ಅಪಾಯ ಉಂಟಾದರೆ ಆಗಬಹುದಾದ ದೊಂಬಿ, ಗಲಭೆ ಗಳ ಬಗ್ಗೆ ಈ ಮುಖ್ಯಮಂತ್ರಿಗಳು ಬಹುವಾಗಿ ಹೆದರಿಕೊಂಡಿದ್ದಾರೆ. ಇದರಿಂದಾಗಿ ತಮ್ಮ ಅಧಿಕಾರಕ್ಕೆ ಎಲ್ಲಿ ಸಂಚಕಾರ ಬರುತ್ತದೋ ಎಂಬ ಚಿಂತೆಯಲ್ಲಿ ತಮ್ಮ ಮೂಲಭೂತ ಕರ್ತವ್ಯದಿಂದ ವಿಮುಖರಾಗುತ್ತಿದ್ದಾರೆ. ಕೆಲವು ಹಂತದವರೆಗೆ ವ್ಯಕ್ತಿಯ ಹಿತ ಮುಖ್ಯವಾಗಿರುತ್ತದೆ. ಆದರೆ ಪರಿಸ್ಥಿತಿ ವಿಕೋಪಗೊಳ್ಳುತ್ತಿದೆ ಯೆಂದು ಅನುಭವವಾಗುತ್ತಲೇ ವ್ಯಕ್ತಿಗಿಂತ ದೇಶದ ಕಾನೂನು ದೊಡ್ಡದು

ಎಂಬ ಜ್ಞಾನೋದಯ ಅಧಿಕಾರದಲ್ಲಿರುವವರಿಗೆ ಬರಬೇಕಾಗುತ್ತದೆ. ನಂತರ ಅದಕ್ಕನುಗುಣವಾದ ಕಾರ್ಯವಿಧಾನವನ್ನು ಅನುಸರಿಸಬೇಕಾಗುತ್ತದೆ. ಕರ್ತವ್ಯ ಪಾಲನೆಯ ಪರಿಣಾಮವಾಗಿ ಅಧಿಕಾರವನ್ನು ಕಳೆದುಕೊಂಡರೂ ಅದರಿಂದ ಗೌರವ ಹೆಚ್ಚಾಗುತ್ತದೆ. ಈ ರೀತಿಯ ಅರಿವು ಮುಖ್ಯಮಂತ್ರಿಗಳಿಗೆ ಮೂಡದೇ ಇರುವುದು ದುರದೃಷ್ಟಕರ.

ಇನ್ನೊಂದು ಪ್ರಶ್ನೆ. ಪೋಲೀಸರು, ಅರೆ-ಸೈನಿಕರು, ಶಸ್ತ್ರಾಸ್ತ್ರಗಳು ಇತ್ಯಾದಿಯ ಪ್ರಯೋಜನವೇನು ? ಅವೆಲ್ಲವೂ ಕೇವಲ ತೋರಿಕೆಗಾಗಿಯೆ ? ಸರ್ಕಾರದ ಖಜಾನೆಗೆ ಭಾರವಾಗುವುದಕ್ಕಾಗಿಯೆ? ಪೋಲೀಸ್ ಕಾರ್ಯಾಚರಣೆಗೆ ಸರ್ಕಾರ ಹೆದರುವುದಾದರೆ ಪೋಲೀಸ್ ವ್ಯವಸ್ಥೆ ಏಕೆ ಬೇಕು? ಅಂದರೆ ಇಂದಿನ ಸರ್ಕಾರಕ್ಕೆ ದಂಡಬಲದಲ್ಲಿಯೂ ನಂಬಿಕೆಯಿಲ್ಲ, ಅಹಿಂಸೆಯಲ್ಲಿಯೂ ನಂಬಿಕೆಯಿಲ್ಲ. ಈ ಇಬ್ಬಗೆ ನೀತಿ ಸರ್ಕಾರವನ್ನು ನಪುಂಸಕನನ್ನಾಗಿ ಮಾಡಿದೆ.

ಈಗ ಕಾಡುಗಳ್ಳ ತಮಿಳು ಉಗ್ರಗಾಮಿಗಳ ಕೈಗೊಂಬೆಯಾಗಿರುವುದು ಕಂಡುಬರುತ್ತಿದೆ. ಆದ್ದರಿಂದ ಅವನ ರಾಜಕೀಯ ಬೇಡಿಕೆಗಳ ಕಾರಣದಿಂದ ಪರಿಸ್ಥಿತಿಯು ಕೈಮೀರಿ ಹೋಗುವ ಸಂಕೇತಗಳು ಕಾಣಬರುತ್ತಿವೆ. ಯಾವ ಉಗ್ರಕ್ರಮಗಳನ್ನು ಕೈಗೊಳ್ಳಲು ಸರ್ಕಾರ ಇದುವರೆಗೆ ಹಿಂಜರಿಯುತ್ತಿದೆಯೋ ಅದೇ ಉಗ್ರಕ್ರಮವನ್ನು ಈಗ ವಿಧಿಯಿಲ್ಲದೆ ಕೈಗೊಳ್ಳಬೇಕಾದ ಸಮಯ ಬರುತ್ತಿದೆ.

ಜನತೆ ಕೇವಲ ಭಾವಾವೇಶದಿಂದ ಯೋಚನೆ ಮಾಡದೆ ವಸ್ತುಸ್ಥಿತಿಯನ್ನು ತಿಳಿದು ಯೋಚನೆ ಮಾಡಬೇಕು. ಸರ್ಕಾರವು ಉಗ್ರ ಕ್ರಮಕೈಗೊಳ್ಳುವಂತೆ ಅದನ್ನು ಒತ್ತಾಯಿಸಬೇಕು. ಸರ್ಕಾರವು ಸಹ ಕೂಡಲೇ ಉಗ್ರ ಕ್ರಮ ಕೈಗೊಂಡು ಡಾ॥ ರಾಜ್‌ರನ್ನು ಮತ್ತು ಅವರ ಸಂಗಡಿಗರನ್ನು ಕಾಡುಗಳ್ಳನ ಕಪಿಮುಷ್ಟಿಯಿಂದ ಬಿಡುಗಡೆ ಮಾಡಬೇಕು ಮತ್ತು ಅವನನ್ನು ಬಂಧಿಸಿ ದೇಶದ ಕಾನೂನುಗಳ ಪ್ರಕಾರ ಶಿಕ್ಷೆ ವಿಧಿಸಬೇಕು. ★

ಮಿತ್ರರನ್ನೇನೂ ಹಣ ಖರೀದಿಸಲಾರದು, ಆದರೆ ಅದು ಉತ್ತಮ ದರ್ಜೆಯ ಶತ್ರುವನ್ನು ಪಡೆಯಬಲ್ಲದು.

– ಸ್ಪೈಕ್ ಮಿಲ್ಲಿಗನ್

ಕ್ರಿಯಾಶೀಲರಾದ ಅಲ್ಪಸಂಖ್ಯಾತರ ಮಾರ್ಗದರ್ಶನವಿಲ್ಲದೆ ಪ್ರಜಾಪ್ರಭುತ್ವ ಉಳಿಯಲಾರದು.

- ಹಾರ್ಲನ್ ಸ್ಟೋನ್

ಆಯೋಡಿನ್ ಉಪ್ಪು ಯಾರ ಲಾಭಕ್ಕಾಗಿ?

-ಎನ್. ಎನ್. ಪಣಿಕ್ಕರ್

"ಆಯೋಡಿನ್ ರಹಿತ ಉಪ್ಪಿನ ಉಪಯೋಗದ ಮೇಲಿನ ನಿರ್ಬಂಧವನ್ನು ತೆಗೆದುಹಾಕಲು ಇನ್ನೂ ಎರಡು ತಿಂಗಳ ಕಾಲಾವಕಾಶ ಬೇಕು" ಎಂಬುದಾಗಿ ಕೇಂದ್ರ ಸರ್ಕಾರದ ಆರೋಗ್ಯ ಮಂತ್ರಿ ಡಾ॥ ಸಿ. ಪಿ. ಠಾಕೂರ್ ಹೇಳಿದ್ದಾರೆಂದು ದಿನಪತ್ರಿಕೆಗಳಲ್ಲಿ ಪ್ರಕಟವಾಗಿದೆ.

ಈ ಸುದ್ದಿಯನ್ನು ಓದಿದಾಗ ಅನಿಸಿದ್ದೇನೆಂದರೆ ಅವರು ವಿಷಯದ ತೀವ್ರತೆಯನ್ನು ಪರಿಗಣಿಸಿಲ್ಲ. ಉಪ್ಪಿನ ಮೇಲಿನ ನಿರ್ಬಂಧ ಅನೇಕ ಕಾರಣಗಳಿಂದ ತಪ್ಪು. ಸ್ವಾಭಾವಿಕ ಉಪ್ಪನ್ನು ಸ್ವಚ್ಛಂದವಾಗಿ ಸಾವಿರಾರು ವರ್ಷಗಳಿಂದ ಮನುಷ್ಯ ಬಳಸಿದ್ದಾನೆ. ನಿರ್ಬಂಧವನ್ನು ತೆಗೆದುಹಾಕಲಾಗುವುದೆಂಬ ಆದೇಶ ಹೊರಟ ಕೂಡಲೇ ದೇಶದಾದ್ಯಂತ ಉಂಟಾದ ಪ್ರತಿಭಟನೆಯ ಕಾರಣದಿಂದ ಎಲ್ಲ ಸರ್ಕಾರಗಳು ಆ ಆದೇಶವನ್ನು ಹಿಂದೆಗೆದುಕೊಳ್ಳಲಾಗುವುದೆಂದು ಮಾತು ಕೊಟ್ಟವು. ಆದರೆ ಉಪ್ಪಿನ ಮಾರುಕಟ್ಟೆಯ ಏಕಸ್ವಾಮ್ಯತೆ ಮತ್ತು ಉಂಟಾಗುತ್ತಿರುವ ಆಘಾತಗಳು ಪ್ರತಿಬಂಧ ಇರುವಷ್ಟು ದಿನವೂ ಹೆಚ್ಚುತ್ತಲೇ ಹೋಗುತ್ತಿವೆ. ಸಾಮಾನ್ಯ ಉಪ್ಪಿನ ನಿಷೇಧವನ್ನು ಮುಂದುವರಿಸಬೇಕೆಂದು ಪ್ರತಿಪಾದಿಸುವ ಹಿತಾಸಕ್ತಿಯ ಗುಂಪು ಪುನಃ ತನ್ನ ತಲೆ ಎತ್ತಿದೆ.

೧೯೯೭ ನವೆಂಬರ್ ೨೭ ರಂದು ಕೇಂದ್ರ ಸರ್ಕಾರದ ಆರೋಗ್ಯ ಮತ್ತು ಕುಟುಂಬ ಇಲಾಖೆಯು ತನ್ನ ಜಿ. ಎಸ್. ಆರ್. ೭೭೦ (ಇ) ಎಂಬ ಆದೇಶದ ಮೂಲಕ ನಿಷೇಧಾಜ್ಞೆಯನ್ನು ವಿಧಿಸಿತು. "ಯಾವುದೇ ವ್ಯಕ್ತಿಯು ಆಯೋಡಿನ್ ಇಲ್ಲದ ಉಪ್ಪನ್ನು ನೇರವಾಗಿ ಮನುಷ್ಯರ ಸೇವನೆಗೋಸ್ಕರ ಮಾರಾಟ ಮಾಡಕೂಡದು ಅಥವಾ ಕೊಡಕೂಡದು."

ಈ ಆದೇಶವನ್ನು ಮಂತ್ರಿ ಮಂಡಳದ ತೀರ್ಮಾನದ ಬೆಂಬಲವಿಲ್ಲದೆ ಮತ್ತು ಸಂಸತ್ತಿನಲ್ಲಿ ಚರ್ಚೆಯಿಲ್ಲದೆ ಹೊರಡಿಸಲಾಯಿತು. ಆ ಸಮಯದಲ್ಲಿ ಸಂಯುಕ್ತ ಸರ್ಕಾರ ಅಧಿಕಾರದಲ್ಲಿತ್ತು. ಕಾಂಗ್ರೆಸ್ (ಐ) ಪಕ್ಷದ ಸರ್ಕಾರವಲ್ಲ. ಆಗ ದೇಶದಾದ್ಯಂತ ನಡೆದ ಪ್ರತಿಭಟನೆ ಮತ್ತು ಮನವಿಗಳ ಸಲ್ಲಿಕೆಯ ಪ್ರಕ್ರಿಯೆ ಇವುಗಳ ನೇತೃತ್ವವನ್ನು ಗಾಂಧೀಪ್ರಣೀತ ಸಂಘಟನೆಗಳು ವಹಿಸಿಕೊಂಡವು; ರಾಷ್ಟ್ರೀಯ ಸ್ವಯಂ ಸೇವಕ ಸಂಘ (ಆರ್‌ಎಸ್‌ಎಸ್) ಅಲ್ಲ. ಆದ್ದರಿಂದ ಈ ಚಳುವಳಿಯನ್ನು "ಆರ್ ಎಸ್ ಎಸ್ ಮತ್ತು ಕಾಂಗ್ರೆಸ್(ಐ) ಮಧ್ಯದ ರಾಜಕೀಯ ಕದನ" ಎಂದು ಬಣ್ಣಿಸುವುದು ತಪ್ಪು ಮತ್ತು ಕುಚೇಷ್ಟೆ.

ನಿರ್ಬಂಧದ ಆದೇಶವನ್ನು ಸಾರ್ವತ್ರಿಕವಾಗಿ ವಿರೋಧಿಸಲಾಯಿತು. ಆಂಧ್ರ ಪ್ರದೇಶದ ಹೈಕೋರ್ಟ್ ಆ ಆದೇಶವನ್ನು ಸ್ಥಗಿತಗೊಳಿಸಿತು; ಕೇರಳ ಸರ್ಕಾರ ತಳ್ಳಿಹಾಕಿತು. ಈ ಅಮಾನುಷ ಆದೇಶದಿಂದ ಸಂವಿಧಾನದ ೨೧ ನೇ ಅನುಚ್ಛೇದದ ಉಲ್ಲಂಘನೆಯಾಯಿತು. ಕೇಂದ್ರದಲ್ಲಿ ಮುಂದೆ ಬಂದ ಸರ್ಕಾರಗಳು ಈ ಸಂಗತಿಯನ್ನು ಸರಿಪಡಿಸುವುದಾಗಿ ಮಾತುಕೊಟ್ಟವು.

ಆಯೋಡಿನ್ ಇಲ್ಲದ ಉಪ್ಪಿನ ಸೇವನೆ ಆರೋಗ್ಯಕ್ಕೆ ಅಪಾಯಕಾರಿ ಎಂಬ ವಿಚಾರವನ್ನು ಭಾರತದಲ್ಲಿಯು ಹಾಗೂ ವಿದೇಶಗಳಲ್ಲಿಯು ತಜ್ಞರು ತಳ್ಳಿಹಾಕಿದ್ದಾರೆ. ೧೯೯೮ರಲ್ಲಿ ಭಾರತೀಯ ವೈದ್ಯಕೀಯ ಸಂಘಟನೆಯ ಮಹಾರಾಷ್ಟ್ರ ರಾಜ್ಯದ ಶಾಖೆಯು ಈ ರೀತಿ ಪ್ರಕಟಿಸಿತು: "ಹೆಚ್ಚುವರಿ ಆಯೋಡಿನ್ ಸೇವನೆಯಿಂದಲೇ ಅನೇಕ ಪ್ರಕಾರದ ತೊಂದರೆಗಳುಂಟಾಗಬಹುದು. ಆದ್ದರಿಂದ ಸರ್ಕಾರವು ಅದರ ಸೇವನೆಯನ್ನು ಕಡ್ಡಾಯಗೊಳಿಸಕೂಡದು ಮತ್ತು ರಾಜ್ಯದಲ್ಲಿರುವ ಸಾಮಾನ್ಯ ಉಪ್ಪಿನ ಮಾರಾಟದ ಮೇಲಿನ ನಿಷೇಧವನ್ನು ತೆಗೆದುಹಾಕಬೇಕು." ಆಯೋಡಿನ್ ಕೊರತೆ ದೇಶದ ಕೆಲವೇ ಭಾಗಗಳಲ್ಲಿ, ಅದು ಕೂಡ ಸಾವಿರ ಜನಕ್ಕೆ ಇಬ್ಬರಲ್ಲಿ ಮಾತ್ರ, ಇರುತ್ತದೆ. ನಿಜ ಸಂಗತಿಯೇನೆಂದರೆ ಪೌಷ್ಟಿಕ ಆಹಾರದ ಅಭಾವ, ಅನಾರೋಗ್ಯವಾದ ಚರಂಡಿ ವ್ಯವಸ್ಥೆ ಇತ್ಯಾದಿಗಳು ಗಳಗಂಟೆ ರೋಗ, ಮಾನಸಿಕ ಹಿಂಜರಿತ, ಕುಂಠಿತ ಬೆಳವಣಿಗೆ ಮತ್ತು ಗರ್ಭಪಾತ ಇವುಗಳಿಗೆ ಕಾರಣವಾಗಿವೆ. ಈ ಎಲ್ಲವುಗಳನ್ನು ಎದುರಿಸಲು ಆಯೋಡಿನ್ ಒಂದೇ ಪರಿಣಾಮಕಾರಿಯಲ್ಲ. ಶರೀರದಲ್ಲಿ ಆಯೋಡಿನ್ ಬೆರೆಯಬೇಕಾದರೆ ಆಹಾರದಲ್ಲಿ ಸತ್ವಗಳು, ಕಬ್ಬಿಣ ಮತ್ತು ಇತರೆ ಸೂಕ್ಷ್ಮ ಪೌಷ್ಟಿಕಾಂಶಗಳೂ ಕೂಡ ಬಹಳ ಅಗತ್ಯ. ಅಲ್ಲದೆ, ಆಯೋಡಿನ್ ಸರಬರಾಜಿಗೆ ಸ್ವಾಭಾವಿಕ ಮೂಲಗಳೂ ಇವೆ. ಉದಾಹರಣೆಗೆ, ಸಮುದ್ರ ಉಪ್ಪು, ಕೆಲವು ತರಕಾರಿಗಳು ಮತ್ತು ಹಣ್ಣುಗಳು, ತೆಂಗಿನಕಾಯಿ, ಮೀನು ಇತ್ಯಾದಿ. ಹೀಗಿರುವಾಗ ಸ್ವಾಭಾವಿಕ ಉಪ್ಪಿಗೆ ಆಯೋಡಿನ್ ಸೇರಿಸಿ ಅದರ ಸೇವನೆಯನ್ನು ಕಡ್ಡಾಯಗೊಳಿಸುವುದರಿಂದ ಅಪಾಯವೇ ಉಂಟಾಗುವುದೆಂದು ಈಗಾಗಲೇ ೧೯೬೦-೮೦ ರಲ್ಲಿ ಪಂಜಾಬ್ ಮತ್ತು ಹಿಮಾಚಲ ಪ್ರದೇಶಗಳಲ್ಲಿಯ ಆಯೋಡಿನ್ ಕೊರತೆ ಪ್ರದೇಶಗಳಲ್ಲಿ ಆಯೋಡಿನ್‌ಯುಕ್ತ ಉಪ್ಪಿನ ಕಡ್ಡಾಯ ಸೇವನೆಯ ಪ್ರಯೋಗದಿಂದ ಆದ ಪರಿಣಾಮಗಳ ಅಧ್ಯಯನದ ಮೂಲಕ ಗೊತ್ತಾಗಿದೆ. ಇದೇ ರೀತಿಯ ಸಂಗತಿಗಳು ಅಮೇರಿಕ (೧೯೩೦ ರಲ್ಲಿ) ಹಾಲಂಡ್ (೧೯೭೦ರಲ್ಲಿ) ಆಸ್ಟ್ರೇಲಿಯದ ತಸ್ಮಾನಿಯಾ (೧೯೬೦ ರಲ್ಲಿ) ಸ್ವಿಟ್ಝರ್ಲಂಡ್ (೧೯೮೦ರಲ್ಲಿ) ಮತ್ತು ಝಿಂಬಾಬ್ವೆ (೧೯೯೦ರಲ್ಲಿ) ಈ ದೇಶಗಳಲ್ಲಿ ನಡೆದ ಪ್ರಯೋಗದಿಂದಲೂ ಗೊತ್ತಾಗಿದೆ. ಭಾರತದಲ್ಲಿ ಈಗ ಚಾಲ್ತಿಯಲ್ಲಿರುವ ಉಪ್ಪಿನ

ವ್ಯಾಪಕ ಆಯೋಡಿನ್‌ಕರಣವು ಕೇವಲ ಒಂದು ನಾಟಕ ಹಾಗೂ ವ್ಯರ್ಥ ಮತ್ತು ಪರಿಣಾಮರಹಿತ ಪ್ರಯತ್ನವೆಂದು ಪರಿಶೋಧನೆಗಳಿಂದ ಗೊತ್ತಾಗಿದೆ. ಏಕೆಂದರೆ ಉಪ್ಪಿನಲ್ಲಿ ಆಯೋಡಿನ್‌ನ್ನು ಸೇರಿಸುವುರಲ್ಲಿಯೇ ಮತ್ತು ಅದರ ವಿತರಣೆಯಲ್ಲಿಯೇ ಅನೇಕ ಲೋಪದೋಷಗಳಿವೆ.

ಈ ನಿಷೇಧಾಜ್ಞೆಯಿಂದ ಲಾಭ ಪಡೆದವರೆಂದರೆ ಏಕಸ್ವಾಮ್ಯ ಹೊಂದಿರುವ ಕಂಪನಿಗಳು! ಸರ್ಕಾರದ ಆದೇಶ ಮತ್ತು ಮಾಧ್ಯಮಗಳ ಬೆಂಬಲದೊಂದಿಗೆ ಇವು ಬಹಳ ವ್ಯಾಪಕವಾಗಿರುವ ಮಾರುಕಟ್ಟೆಯಲ್ಲಿ ತಮ್ಮ ಬೇರುಬಿಟ್ಟಿವೆ. ಇದರ ಪರಿಣಾಮವಾಗಿ ಸಾಂಪ್ರದಾಯಕವಾಗಿ ಉಪ್ಪು ತಯಾರಿಸುತ್ತಿರುವ ಚಿಕ್ಕ ಉತ್ಪಾದಕರು ನಿರುದ್ಯೋಗಿಗಳಾಗುತ್ತಿದ್ದಾರೆ. ಅಂತಿಮವಾಗಿ ನಷ್ಟಕ್ಕೊಳಗಾಗಿರುವವರು ಸಾರ್ವಜನಿಕರು, ಸುಪ್ತವಾಗಿ ಅಪಾಯಕಾರಿಯಾಗಿರುವುದನ್ನು ಒಂದು ಕೆ. ಜಿ. ಗೆ ಏಳು ರೂಪಾಯಿ ಕೊಟ್ಟು ಖ ರೀ ದಿ ಸ ಬೇ ಕಾ ಗಿ ಬಂದಿದೆ. ತುತ್ತುಕೋಡಿಯಲ್ಲಿ ಪಾರಂಪರಿಕವಾಗಿ ಉಪ್ಪು ತಯಾರಿಸುವ ಸಣ್ಣ ಉದ್ಯಮಿಗಳಿಗೆ ಒಂದು ಕೆ.ಜಿ. ಉಪ್ಪಿಗೆ ಕೇವಲ ೨೫ ಪೈಸೆ ದೊರೆಯುತ್ತಿದೆ. ಕಡ್ಡಾಯ ಆಯೋಡಿನ್‌ಕರಣದಿಂದ ಅಂಥ ಸಣ್ಣ ಉತ್ಪಾದಕರು ಆ ಕ್ಷೇತ್ರದಿಂದ ನಿರ್ಗಮಿಸಬೇಕಾಗುತ್ತದೆ. ನೂರುಕೋಟಿ ಖರೀದಿದಾರರಿರುವ ಮಾರುಕಟ್ಟೆಯನ್ನು ತಮ್ಮ ಏಕಸ್ವಾಮ್ಯದ ವಶಕ್ಕೆ ತೆಗೆದುಕೊಳ್ಳುವುದರ ಮೂಲಕ ವಾರ್ಷಿಕ ತಲಾ ೪ ಕೇಜಿಗಳ ಪ್ರಕಾರ ಮಧ್ಯವರ್ತಿಗಳು ವರ್ಷವೊಂದಕ್ಕೆ ೨೦೦೦ ಕೋಟಿ ರೂಪಾಯಿಗೂ ಹೆಚ್ಚು ಹಣವನ್ನು ಮಾಡಬಹುದು!

ಈ ರೀತಿ ರಕ್ತದ ರುಚಿ ಕಂಡ ಕ್ರೂರ ಪ್ರಾಣಿಗಳಾದ ಮನುಷ್ಯರು ಕಬ್ಬಿಣದ ಕಡ್ಡಾಯ ಸೇವನೆಯನ್ನೂ ಜಾರಿಗೆ ತರಬಹುದು. ಮೂಲಭೂತ ಅವಶ್ಯಕತೆಗಳಾದ ಕುಡಿಯುವ ನೀರು ದೊರೆಯದೇ ಇರುವಾಗ ಮತ್ತು ತಂಬಾಕು, ಹೆಂಡ ಮತ್ತು ಅಪಾಯಕಾರಿ ಪದಾರ್ಥಗಳು ಸ್ವಚ್ಛಂದವಾಗಿ ಮಾರಾಟವಾಗುತ್ತಿರುವಾಗ ಇಂಥ ವಿಷಯಗಳು ಮುಂದೆ ಬರುತ್ತಿವೆ.

ಮುಕ್ತ ಮಾರುಕಟ್ಟೆ ಹಾಗೂ ಖಾಸಗೀಕರಣದ ಈ ಕಾಲದಲ್ಲಿ ಸರ್ಕಾರವು ಸ್ಪರ್ಧೆಯನ್ನು ನಿರಾಕರಿಸಬಾರದು. ನಿಷೇಧಾಜ್ಞೆಯನ್ನು ಈ ಕೂಡಲೇ ಎತ್ತಬೇಕು. ಆಡಳಿತವನ್ನು ಬಿಗಿ ಮಾಡುವುದರ ಮೂಲಕ ಇಂಥ ನಿಷೇಧಾಜ್ಞೆಗಳು ಹೊರಗೆ ಜಾರಿ ಬರದಂತೆ ನೋಡಿಕೊಳ್ಳಬೇಕು. ಜನತೆಯ ಮೂಲಭೂತ ಹಕ್ಕುಗಳಿಗೆ ಚ್ಯುತಿ ಬರದಂತೆ ೨೧ ನೇ ವಿಧಿಯನ್ನು ಬಲಪಡಿಸುವ ಬಗ್ಗೆಯೂ ಸಂವಿಧಾನ ಪುನರ್‌ವಿಮರ್ಶಾ ಸಮಿತಿ ಯೋಚಿಸಬೇಕು.

(ದಿ ಹಿಂದೂ ಸಾಭಾರ) ಅನು : ಸು. ಕೌ.

ವೈಚಾರಿಕ ಧಾರಾವಾಹಿ..................

ಪ್ರತಿಯೊಬ್ಬ ಮನುಷ್ಯನೂ ಪೂರ್ಣ.

– ದಾದಾ ಧರ್ಮಾಧಿಕಾರಿ

(ದಾದಾ ಧರ್ಮಾಧಿಕಾರಿ ಭಾರತದ ಶ್ರೇಷ್ಠ ಚಿಂತಕರಲ್ಲಿ ಒಬ್ಬರಾಗಿದ್ದರು. ಜೀವನವನ್ನು ವಸ್ತುನಿಷ್ಠೆಯ ದೃಷ್ಟಿಯಿಂದ ನೋಡಿದರು. ಅವರ ಶತಮಾನೋತ್ಸವದ ಸಂದರ್ಭವನ್ನು ಉಪಯೋಗಿಸಿಕೊಂಡು ಓದುಗರಿಗೆ ಅವರ ವಿಚಾರಪೂರ್ಣ ಅನುಭವದ ಮಾತುಗಳನ್ನು ಇಲ್ಲಿ ಕ್ರಮಶಃ ಕೊಡಲಾಗುತ್ತಿದೆ. ಇದು ನಾಲ್ಕನೇಯ ಸರಣಿ. –ಸಂ)

ಇದಕ್ಕೆ ಅಡಚಣೆ ಎಲ್ಲಿದೆಯೋ ತಿಳಿಯುವುದಿಲ್ಲ. ಇವತ್ತಿನ ರಾಜಕೀಯದಲ್ಲಿ ಒಬ್ಬ ರಾಜಕಾರಣಿ ಇನ್ನೊಬ್ಬ ರಾಜಕಾರಣಿಯೊಡನೆ ಕಲತಾಗ ಇಬ್ಬರೂ ಆಡುವ ಮಾತು ಒಂದೇ ಆದರೂ ಒಬ್ಬರ ಮಾತು ಇನ್ನೊಬ್ಬರಿಗೆ ಅರ್ಥವಾಗದು. ಇದು ರಾಜತಂತ್ರದ ಭಾಷೆ. ಎಲ್ಲರಿಗೂ ಗೊತ್ತಿರುವ ಮಾತು, ಆದರೆ ಯಾರಿಗೂ ಅರ್ಥವಾಗದ ಮಾತು. ಅವರು ಆಡಿದ ಮಾತು ಕನ್ನಡ. ಮಾತು ತಿಳಿಯಿತು. ಮರ್ಮ ತಿಳಿಯಲಿಲ್ಲ. ಅರ್ಥವಾಗಲಿಲ್ಲ. ಇದು ಡಿಪ್ಲಾಮೆಸಿ. ಒಬ್ಬರು ಇನ್ನೊಬ್ಬರ ಸಮೀಪಕ್ಕೆ ಬರಬಾರದು. ಚೌ ಮತ್ತು ನೆಹರು ಇಬ್ಬರೂ ಭೇಟಿಯಾಗುತ್ತಾರೆ. ಒಟ್ಟಿಗೆ ಕೂಡುತ್ತಾರೆ. ಊಟ ಮಾಡುತ್ತಾರೆ. ಮಾತಾಡುತ್ತಾರೆ. ಕೊನೆಯಲ್ಲಿ ನಿಮ್ಮನ್ನು ಕೇಳಿದರೆ ಏನು ಹೇಳುತ್ತೀರಿ? 'ಚೌ ಮತ್ತು ನೆಹರು ಭೇಟಿಯಲ್ಲ ಆದದ್ದು ಚೀನಾದ ಪ್ರಧಾನಿಯವರು ಭಾರತದ ಪ್ರಧಾನಿಯನ್ನು ಭೇಟಿಯಾದರು. ಪ್ರಧಾನಿಗಳಿಬ್ಬರೂ ಮಾತಾಡಿಕೊಂಡರು. ಚೌ–ನೆಹರು ಅವರ ಮಾತುಕತೆ ಆಗಲಿಲ್ಲ." ಹಾಗಾದರೆ ಅವರ ಭಾಷೆಯಲ್ಲಿ ಭೇದವಿದೆಯೆ? ಹೌದು. ಅದು ಪ್ರಧಾನಮಂತ್ರಿಗಳ ಭಾಷೆ, ಮನುಷ್ಯರ ಭಾಷೆಯಲ್ಲ. ದರಬಾರಿ ಭಾಷೆ, ಸಭೆಯ ಭಾಷೆ, ಧರ್ಮದ ಭಾಷೆ, ಸಂಸ್ಥೆಗಳ ಭಾಷೆ ಇತ್ಯಾದಿ ಬೇರೆ ಬೇರೆ ಭಾಷೆಗಳು ಇವೆ. ಭಾಷೆ ಮಾನವೀಯ ಆಗಬೇಕು, ಸಾಮಾನ್ಯ ಮನುಷ್ಯರ ಭಾಷೆ ಆಗಬೇಕು. ಮಾನವೀಯ ಭಾಷೆ ಎಂದರೆ ಒಬ್ಬರನ್ನು ಒಬ್ಬರ ಹೃದಯಕ್ಕೆ ಹತ್ತಿರ ತರುವ ಭಾಷೆ. ಅದೇ ಸಭ್ಯ ಭಾಷೆ, ನಿಜವಾದ ಭಾಷೆ, ಸಾಂಸ್ಕೃತಿಕ ಭಾಷೆ. ಅದರ ಹೊರಗಣ ರೂಪ ಬೇಕಾದ್ದಿರಲಿ.

ಮರಾಠಿಯಲ್ಲಿ ತುಕಾರಾಮರದು ಒಂದು ವಾಕ್ಯ ಇದೆ : ಭಗವಂತನಿಗೂ ನಿನಗೂ ನಡುವೆ ಅಡ್ಡವಾಗಿ ಏನೇ ಬರಲಿ, ತಾಯಿ–ತಂದೆಯೇ ಬರಲಿ, ತ್ಯಜಿಸಬೇಕಾದುದೇ. ಇವತ್ತು ತುಕಾರಾಮರು ಇದ್ದಿದ್ದರೆ ಏನು ಹೇಳುತ್ತಿದ್ದರು? "ಮನುಷ್ಯ – ಮನುಷ್ಯರ ನಡುವೆ ಏನೇ ಅಡ್ಡ ಬರಲಿ, ಎಷ್ಟು ದೊಡ್ಡದೇ ಇರಲಿ ಅದು ತ್ಯಾಜ್ಯ. ಎಷ್ಟೇ ಪೂಜ್ಯವಾದರೂ ಅದು ತ್ಯಾಜ್ಯ." ಗಾಂಧೀ

ಇದನ್ನು ಗುರುತಿಸಿಕೊಂಡಿದ್ದರು. "ನನ್ನ ಧರ್ಮಕ್ಕೆ ಭೌಗೋಲಿಕ ಮೇರೆ ಯಾವುದೂ ಇಲ್ಲ, ನನ್ನ ಧರ್ಮ ಸಾರ್ವಭೌಮ, ಸಾರ್ವತ್ರಿಕ." ಕೇಳಲಿಕ್ಕೆ ಈ ವಾಕ್ಯ ಬಹಳ ಇಂಪು. ಆದರೆ ಅದರ ಅರ್ಥ?

ನಾವು ಹೇಳುತ್ತೇವೆ : ಪಶ್ಚಿಮದ ಪ್ರಕೃತಿ ಸಂಸ್ಕೃತಿ ಬೇರೆ, ಪೂರ್ವದ ಪ್ರಕೃತಿ ಸಂಸ್ಕೃತಿ ಬೇರೆ. ರಾಜಾಜಿಯಿಂದ ಹಿಡಿದು ಶಂಕರನ್ ನಂಬೂದರಿ ಪಾದರ ವರೆಗೆ ಎಲ್ಲ ರಾಜಕಾರಣಿಗಳೂ 'ನಮ್ಮ ದೇಶದಲ್ಲಿ ಆಧ್ಯಾತ್ಮಿಕತೆ ಇದೆ' ಎನ್ನುತ್ತಾರೆ. ನಂಬೂದರಿಪಾದರ ಭಾಷೆ ಬೇರೆ ಎಂದಾರು. ನಮ್ಮ ವ್ಯವಹಾರ ದಲ್ಲಿ ಒಂದು ಪರಂಪರೆ, ಒಂದು ಪದ್ಧತಿ ಇದೆ. ಕಮ್ಯೂನಿಸಂ ಇಲ್ಲಿ ಬಂದರೆ ಆ ಪದ್ಧತಿಗೆ ಅನುರೂಪವಾಗಿ ಬಂದೀತು. ಕಾಮ್ರೇಡ್ ಶಬ್ದ ಹೋಗಿ ಸಂಗಾತಿ-ಸಾಥಿ ಮಾತು ಬಂತು. ಈಗ ಭಾಯಿ ಬಂತು. ನಮಸ್ಕಾರ ಎಂದರೂ ಚಿಂತೆಯಿಲ್ಲ, ಇಲ್ಲಿನ ಪರಂಪರೆಯೆ ಹಾಗೆ. ಇಷ್ಟೆಲ್ಲ ಆದರೂ ಪೂರ್ವ-ಪಶ್ಚಿಮ ಗಳ ಭೇದ ಎಂದಾಗ ಹಳೆಯದು - ಹೊಸದು ಎಂದು ಅರ್ಥವಾದರೆ ಅಡ್ಡಿ ಯಿಲ್ಲ. ಹಾಗಲ್ಲ, ಪೂರ್ವದ್ದೇ ಬೇರೆ ಸಂಸ್ಕೃತಿ, ಪಶ್ಚಿಮದ್ದೇ ಬೇರೆ ಎಂದರೆ ಯೋಚಿಸಬೇಕಾದ್ದೇ. ನಮ್ಮ ದೇಶದಲ್ಲಿ ಆಧ್ಯಾತ್ಮಿಕತೆಯ ಪರಂಪರೆ ಇದೆ, ಭೌತಿಕ ಸುಖದ ಬಗ್ಗೆ ಉಪೇಕ್ಷೆ ಇದೆ ಎನ್ನುತ್ತೇವೆ ಒಂದು ಕಡೆ. ಇನ್ನೊಂದು ಕಡೆ ಟೆನೆಸ್ಸಿ ವ್ಯಾಲಿಯಂಥ ಭಾಕ್ರಾನಾಂಗಲ್ ನಮ್ಮಲ್ಲಿ ಆಗಿದೆ ಎನ್ನುತ್ತೇವೆ. ಬೇರೆ ದೇಶಗಳಲ್ಲಿ ಹಳ್ಳಿಹಳ್ಳಿಯಲ್ಲೂ ಮನೆಮನೆಯಲ್ಲೂ ವಿದ್ಯುತ್ತು ಬಂದಿದೆ. ನಮ್ಮಲ್ಲಿ ಇನ್ನೂ ಬಂದಿಲ್ಲ. ಬೇಗ ಬರುತ್ತದೆ ಎನ್ನುತ್ತೇವೆ. ವಿಮಾನ ಇನ್ನೂ ಸರ್ವಸುಲಭವಾಗಿಲ್ಲ. ಬೇಗ ಆಗುತ್ತದೆ ಎನ್ನುತ್ತೇವೆ. ಏನು ಇದರ ಅರ್ಥ? ಈ ವಿಜ್ಞಾನ ಪಶ್ಚಿಮದ್ದೂ ಅಲ್ಲ, ಪೂರ್ವದ್ದೂ ಅಲ್ಲ. ವಿಜ್ಞಾನ ಸಾರ್ವಜನಿಕ. ಎಲ್ಲ ದೇಶಗಳ ಎಲ್ಲ ವಿಜ್ಞಾನಿಗಳು ತಮ್ಮ ಆವಿಷ್ಕಾರಗಳನ್ನು ಏಕೀಕರಣ ಮಾಡಿರದಿದ್ದರೆ ಈ ಹೊಸ ಶೋಧ ಒಂದೂ ಸಾಧ್ಯವಾಗುತ್ತಿರ ಲಿಲ್ಲ. ಈ ಆವಿಷ್ಕಾರಗಳ ಏಕೀಕರಣದಿಂದ ಜಗತ್ತು ಇಂದು ಒಂದಾಗಿಯಾದರೂ ಬದುಕಬೇಕು ಇಲ್ಲವೆ ಬದುಕದೆ ನಾಶವಾಗಬೇಕು ಎಂಬ ಸ್ಥಿತಿಗೆ ಬಂದಿದೆ. ವಿಜ್ಞಾನದ ಸ್ವಭಾವ ಸಾರ್ವಭೌಮಿಕ. ಎಲ್ಲ ದೇಶಗಳ ವಿಜ್ಞಾನಿಗಳ ಸಹಕಾರ ದಿಂದ ಅಣುಶಕ್ತಿಯ ಆವಿಷ್ಕಾರವಾಗಿದೆ. ಅಂತರರಾಷ್ಟ್ರೀಯ ಸಹಕಾರವಿಲ್ಲದೆ ವೈಜ್ಞಾನಿಕ ಆವಿಷ್ಕಾರ ಅಸಂಭವ ಎಂದರೆ ಅಂತರರಾಷ್ಟ್ರೀಯ ಸಹಕಾರವಿಲ್ಲದೆ ವೈಜ್ಞಾನಿಕ ಜೀವನವೂ ಅಸಂಭವ. ಈ ಅನಿವಾರ್ಯತೆ ವಿಜ್ಞಾನದಿಂದ ಹುಟ್ಟಿ ಬಂದಿದೆ. ಆದ್ದರಿಂದ ನಮ್ಮ ಮನಸ್ಸಿನಲ್ಲಿ ಈ ಪೂರ್ವ - ಪಶ್ಚಿಮ ಭೇದ ಇರ ಲಾಗದು. ಪ್ರಾಚೀನ - ಅರ್ವಾಚೀನ ಎಂಬುದು ಕಾಲವಾಚಕ ಭೇದ. ಕಾಲ

ವಾಚಕ ಭೇದ ಬೇರೆ, ದೇಶವಾಚಕ ಭೇದ ಬೇರೆ. ಪ್ರಾಚೀನತೆ ಇನ್ನೂ ಉಳಿದಿರುವ ಕಡೆ ಪೂರ್ವ, ಆಧುನಿಕತೆ ಬಂದಿರುವ ಕಡೆ ಪಶ್ಚಿಮ ಎಂದರೆ ಅಡ್ಡಿಯಿಲ್ಲ. ಏನೋ ಒಂದು ಅನುಕೂಲಕ್ಕಾಗಿ ಹಾಗೆ. ಆದರೆ ಈ ಕಾರಣ ದಿಂದ ಮನುಷ್ಯನಲ್ಲೇ ಭೇದ ಬಂದರೆ ಅದು ವಿಪತ್ಕರ. ಬಿಳಿಯರ ಸಂಸ್ಕೃತಿಯೇ ಬೇರೆ, ಕರಿಯರ ಸಂಸ್ಕೃತಿಯೇ ಬೇರೆ ಎಂಬ ಭೇದ ಹುಟ್ಟಿದೆ. ಇದನ್ನು ಆಳವಾಗಿ ಯೋಚಿಸಬೇಕು. ಇಲ್ಲದಿದ್ದರೆ ನಮ್ಮ ಜೈ ಜಗತ್ ಘೋಷಣೆ ವ್ಯರ್ಥವಾದೀತು. ಇದು ನಕ್ಷೆಯಲ್ಲಿ, ಬಾವುಟದಲ್ಲಿ ಬರೆಯುವ ಮಾತಲ್ಲ. ಹೃದಯದಲ್ಲಿ ಬರೆಯುವ ಮಾತು.

ನಾವು ಮೊಟ್ಟಮೊದಲು ರಾಜ್ಯಶಾಸ್ತ್ರದ ಅಧ್ಯಯನವನ್ನು ಪ್ರಾರಂಭಿಸಿ ದಾಗ ಓದಿದುದು 'ಹಿಸ್ಟರಿ ಆಫ್ ಸಿವಿಲಿಜೇಷನ್ – ಸಂಸ್ಕೃತಿಯ ಇತಿಹಾಸ.' ಅದರಲ್ಲಿ ಮೊದಲನೆ ವಾಕ್ಯ ಹೀಗಿದೆ : ಗಾಳಿ – ನೀರು, ಪ್ರಾಕೃತಿಕ ಪರಿಸ್ಥಿತಿ, ವಾತಾವರಣಗಳ ಪರಿಣಾಮ ಮನುಷ್ಯನ ಪ್ರಕೃತಿಯ ಮೇಲೆ ಹೆಚ್ಚು. ಆದ್ದರಿಂದ ಬೇರೆ ಬೇರೆ ದೇಶಗಳ ಜನರಲ್ಲಿ ಬೇರೆ ಬೇರೆ ಪ್ರಕೃತಿ, ಬೇರೆ ಬೇರೆ ಸಂಸ್ಕೃತಿ ಕಾಣಬರುತ್ತದೆ.' ಅಂದರೆ ಕೆಲವು ಸಂಸ್ಕೃತಿ ಉತ್ಕೃಷ್ಟ, ಕೆಲವು ಕನಿಷ್ಠ ಎಂಬ ಮಾತಿಗೆ ಅವಕಾಶವಾಯಿತು. ಇದರಿಂದಲೇ ಬಿಳಿಯರ ಉತ್ಕೃಷ್ಟತೆಯ ಮಾತು ಹುಟ್ಟಿದುದು. ಈಗಿನ ಅಪಾರ್ಥೀಡ್ ಅದೇ. ಅಸ್ಪೃಶ್ಯತೆಯ ಮೂಲವೂ ಇದೇ. ಕೆಲವು ಕಡೆ ಉತ್ಕೃಷ್ಟತೆ. ನಿಕೃಷ್ಟತೆಗಳು ದೇಶಕಾಲದಿಂದ ಬರುತ್ತವೆ. ಕೆಲವು ಕಡೆ ಜನ್ಮದಿಂದ ಬರುತ್ತವೆ. ಇದರದು ಬಹುರೂಪ. ಒಂದು ವರ್ಣವಾದ, ಇನ್ನೊಂದು ಜಾತಿವಾದ. ಎರಡರಲ್ಲೂ ಒಂದು ಸಮಾನತೆಯಿದೆ. ವರ್ಣವೂ ವಂಶಕ್ಕೆ ಸಂಬಂಧಿಸಿದ್ದು, ಜಾತಿಯೂ ವಂಶಕ್ಕೆ ಸಂಬಂಧಿಸಿದ್ದು. ಎರಡೂ ಮದುವೆಗೆ ಸಂಬಂಧಿಸಿದ್ದು. ಬಿಳಿಯರ - ಕರಿಯರ ಮದುವೆಯಾದರೆ ಇಡೀ ಸಮಾಜವೇ ಅದರ ವಿರುದ್ಧ ಪ್ರತಿಕ್ರಿಯೆ ತೋರುತ್ತದೆ. ನೀಗ್ರೋಗಳಲ್ಲಿ ಬಿಳಿಯರು ಮದುವೆಯಾಗಬಾರದು. ತಮ್ಮಲ್ಲಿ ಮಾತ್ರ. ನಾವೂ ಆದಷ್ಟು ಕೆಂಪಗಿರುವ ಹುಡುಗನನ್ನೇ ಹುಡುಕುತ್ತೇವೆ. ಹುಡುಗನ ಕಡೆಯವರು ಬೆಳ್ಳಗಿರುವ ಹುಡುಗಿಯನ್ನೇ ನೋಡುತ್ತಾರೆ. ರವೀಂದ್ರನಾಥ ಠಾಕೂರರ ಮನೆಗೆ ಶ್ಯಾಮಲ ವರ್ಣದ ಹುಡುಗಿಯನ್ನು ತರುತ್ತಲೇ ಇರಲಿಲ್ಲ ವಂತೆ. ಜನ್ಮದ ಪರಿಸ್ಥಿತಿಯನ್ನು ನಿಯಂತ್ರಣಮಾಡಲು ಮನುಷ್ಯ ಹೊರಟಾಗ ವಂಶಭೇದದ ಕಲ್ಪನೆ ಬರುತ್ತದೆ.

ಎಲ್ಲಕ್ಕಿಂತ ಮೊದಲಿನ ಅಡಚಣೆ ಇದು. ನೈಸರ್ಗಿಕ ಅಂತರಾಯ. ರಕ್ತ-ವರ್ಣಗಳ ಭೇದ ಎಂಬ ಅಂತರಾಯ. ಇದರಿಂದ ಹುಟ್ಟಿದ್ದು ರಕ್ತಶುದ್ಧಿ,

ವಂಶದ ಕುಲೀನತೆಯ ಭಾವನೆ. ಶುದ್ಧರಕ್ತದವನು ಕುಲೀನ, ಶುದ್ಧರಕ್ತ ಇಲ್ಲದವನು ಅಕುಲೀನ. ಇವನು ಶುದ್ಧವರ್ಣದವನು. ಇವನು ಅಲ್ಲ. ಈ ರಕ್ತಶುದ್ಧಿಯ ಭಾವನೆ ಮನುಷ್ಯರನ್ನು ಒಬ್ಬರಿಗೊಬ್ಬರು ದೂರವಾಗುವಂತೆ ಮಾಡುತ್ತದೆ. ಯಾರ ರಕ್ತ ಅಶುದ್ಧ? ನಮ್ಮ ರಕ್ತ ಅಲ್ಲದವರದು. ಬೇರೇನು ಅರ್ಥ? ಬೆಳಗಾಂನಲ್ಲಿ ಕನ್ನಡ ರಕ್ತದವರು, ಮರಾಠೀ ರಕ್ತದವರು ಎಂದು ಜಗಳವಾಡುತ್ತಾರೆ. ಅವರ ತಲೆ ಇವರು, ಇವರ ತಲೆ ಅವರು ಒಡೆದು ನೆತ್ತರು ಹರಿಯಿಸುತ್ತಾರೆ. ಅದೇ ಬೆಂಗಳೂರಿನ ಆಸ್ಪತ್ರೆಯಲ್ಲಿ ರಕ್ತದಾನ ಮಾಡುವಾಗ – ಆ ನೆತ್ತರು ಮರಾಠಿಗನದೇ ಕನ್ನಡಿಗನದೇ ಯಾರದು ಎಂಬ ಪ್ರಶ್ನೆ ಬರುವುದಿಲ್ಲ. ಯಾರ ರಕ್ತ ಯಾರಿಗಾದರೂ ಆಗಬಹುದು. ಅದು ವ್ಯಕ್ತಿನಿರಪೇಕ್ಷ. ವ್ಯಕ್ತಿಯ ಸಂಬಂಧ ಬಂತೋ ಮರಾಠಿ, ತೆಲುಗು, ಕನ್ನಡ ಎಲ್ಲವೂ ಬಂತು. ಯಾವ ರೋಗಿಗೆ ಬೇಕಾದರೂ ನಮ್ಮ ರಕ್ತ ಕೊಡಲು ಸಿದ್ಧ, ಗಡಿಯಲ್ಲಿ ಬಂದರೆ ಅಲ್ಲಿ ಜಗಳ. ಅಲ್ಲೂ ವ್ಯಕ್ತಿನಿರಪೇಕ್ಷತೆಯೇ ಅಡಚಣೆ. ಸಾಮುದಾಯಿಕ ಹೆಸರುಗಳಲ್ಲಿ ಮನುಷ್ಯ ಮಾಯವಾಗಿ ಹೋಗುತ್ತಾನೆ. ಅದರಲ್ಲಿ ಅವನ ವಿಕಾಸವಾಗದು. ಸಮುದಾಯದಲ್ಲಿ ಮನುಷ್ಯ ಮುಳುಗಿಹೋಗುವುದು ಬೇರೆ, ಅಳಿದುಹೋಗುವುದು ಬೇರೆ. ಗಾಂಧೀಜೀ ಸಮುದಾಯದಲ್ಲಿ ಮುಳುಗಿದ್ದರು. ಅಳಿದುಹೋಗಿರಲಿಲ್ಲ. ತಮ್ಮ ಬದುಕಿನಲ್ಲಿ ಇತರರನ್ನೂ ಸೇರಿಸಿಕೊಂಡರು. ಎರಡು ಬಗೆಯ ಕೆಲಸ ಇದು. ರಕ್ತದಾನದ ಅವಶ್ಯಕತೆಯಿದ್ದಲ್ಲಿ ರಕ್ತದಾನ ಮಾಡಬೇಕು. ಆಗತ್ಯಬಿದ್ದಲ್ಲಿ ತನ್ನ ನೆತ್ತರನ್ನೂ ಸುರಿಸಬೇಕು. ಇತರರ ನೆತ್ತರನ್ನು ಹರಿಯಿಸಲಾಗದು. ರಕ್ತ ಸ್ರಾವವೂ ಆದೀತು, ರಕ್ತಪಾತವೂ ಆದೀತು. ಆ ರಕ್ತ ತನ್ನದು, ಇತರರದಲ್ಲ.

ಗಾಂಧೀಯ ವ್ಯವಹಾರವು ತತ್ತ್ವಪರೀಕ್ಷೆಯ ಪ್ರಯೋಗ ಎಂದಿದ್ದೆ. ಒಂದು ಟೆಸ್ಟ್. ಸಿದ್ಧಾಂತವನ್ನು ಪರೀಕ್ಷಿಸಬೇಕೋ ವ್ಯವಹಾರದಲ್ಲಿ ಪರೀಕ್ಷಿಸಿ. ದರ್ಶನವನ್ನು ಪರೀಕ್ಷಿಸಬೇಕೋ, ವರ್ತನದಲ್ಲಿ ಪರೀಕ್ಷಿಸಿ. ಯಾರ ವರ್ತನದಲ್ಲಿ? ನನ್ನ ಕುಲೀನತೆ ಇತರರಿಗೂ ನನಗೂ ಅಡ್ಡಬರುವುದಿಲ್ಲ ಎಂಬುವವರ ವರ್ತನದಲ್ಲಿ. ಒಂದು ಕಡೆ ಶ್ರೇಷ್ಠ ಬ್ರಾಹ್ಮಣರ ಕುಲೀನತೆ, ಇನ್ನೊಂದು ಕಡೆ ಹಿಟ್ಲರನ ನಾಜೀ ಕುಲೀನತೆ. ಹಿಟ್ಲರನ ಕುಲೀನತೆಯ ಭಾವನೆಯ ಪರಿಣಾಮ ಯುರೋಪಿನಲ್ಲಿ ಜ್ಯೂಗಳಿಗೆ ಆದ ಹಿಂಸೆ. ಎಡ್ವಿನ್ ಮಾಂಟೆಗ್ಯೂ, ಕಾರ್ಲ್ ಮಾರ್ಕ್ಸ್ ಜ್ಯೂಗಳು. ಐನ್‌ಸ್ಟೀನ್ ಕೂಡ. ಕಾರ್ಲ್‌ಮಾರ್ಕ್ಸ್ ಹಿಟ್ಲರನ ಕಾಲದಲ್ಲಿ ಜರ್ಮನಿಯಲ್ಲಿದ್ದಿದ್ದರೆ ಐನ್‌ಸ್ಟೀನ್‌ಗೆ ಆದ ಗತಿಯೆ ಅವನಿಗೂ ಆಗುತ್ತಿತ್ತು. ಈ ಜ್ಯೂಗಳ ವೈರಕ್ಕೆ ಕಾರಣ ವರ್ಣಭೇದ, ಜಾತಿಭೇದ. ವರ್ಣ, ಜಾತಿಗಳು ಅಸ್ಪೃಶ್ಯತೆಯ ಭಾವನೆಯನ್ನು ಹುಟ್ಟಿಸುತ್ತವೆ.

ಮನುಷ್ಯನಿಗೆ ಮನುಷ್ಯನ ಸ್ಪರ್ಶ ಪ್ರಿಯವಾಗಬೇಕು. ಹೂವಿನಲ್ಲಿ ಸುಗಂಧವಿದೆ, ಕರ್ಪೂರದಲ್ಲಿ ಸುಗಂಧವಿದೆ. ಹಾಗಾದರೆ ಮನುಷ್ಯನಲ್ಲಿ ಸುಗಂಧ ಇಲ್ಲವೆ ಎಂದು ಕೇಳುತ್ತಾರೆ ಗಾಂಧೀ. ರಘುವಂಶದಲ್ಲಿ ಕಾಳಿದಾಸ ವರ್ಣಿಸಿದಾನೆ. ಧೂಳಿನಲ್ಲಿ ಕೆಸರಿನಲ್ಲಿ ಆಡಿ ಕೆಸರು ಮೆತ್ತಿದ ಮೈಯ ಮಗು ಯಾರ ಮಡಿಲಲ್ಲಿ ಆಡುತ್ತದೆಯೋ, ಆ ಧೂಳು–ಕೆಸರುಗಳಿಂದ ಯಾರ ಬಟ್ಟೆ ಕೊಳೆ ಆಗುತ್ತದೆಯೋ ಅವನು ಧನ್ಯನಂತೆ. ಆ ಮಗುವನ್ನು ಎತ್ತಿಕೊಂಡಾಗ ಬಿಳಿಯ ಬಟ್ಟೆ ಕೊಳೆಯಾಗುವುದಿಲ್ಲ, ಪವಿತ್ರವಾಗುತ್ತದೆ. ಇದು ಮನುಷ್ಯನ ಸುಗಂಧ. ಗುಂಪಿನಲ್ಲಿ ಇರಲು ಮನುಷ್ಯ ಇಷ್ಟಪಡುವುದಿಲ್ಲ. ಗುಂಪಿನಲ್ಲಿ ಮನುಷ್ಯ ನಷ್ಟವಾಗುತ್ತಾನೆ. ಗುಂಪಿನಲ್ಲಿ ಪ್ರೇಮ ಇರದು. ಯಾರಿಗೆ ಯಾರೂ ಜೊತೆಯಿಲ್ಲ ಅಲ್ಲಿ. ಅಂಥಲ್ಲಿ – ಎಲ್ಲಿ ಪ್ರೇಮ ಇಲ್ಲವೋ ಅಲ್ಲಿ – ಮನುಷ್ಯ ಅಂಜುತ್ತಾನೆ. ಎಲ್ಲಿ ಪ್ರೇಮ ಇದೆಯೋ ಅಲ್ಲಿ ಮನುಷ್ಯನ ಪರಿಮಳ ಸೂಸುತ್ತದೆ.

ಶಾಸ್ತ್ರದಲ್ಲಿ ಹೇಳಿದೆ. ಸಂಯಮಿಗಳೂ ಹೇಳುತ್ತಾರೆ: ಸ್ಪರ್ಶವು ದೋಷಯುಕ್ತ ಎಂದು. ಸ್ಪರ್ಶವನ್ನು ವಿಷಯ ಎಂದು ಅವರು ತಿಳಿಯುತ್ತಾರೆ. ಸ್ಪರ್ಶಪ್ರಿಯತೆಯನ್ನು ಅಧಮ ಎನ್ನುತ್ತಾರೆ. ಮನುಷ್ಯನ ಶರೀರವು ಉಪಭೋಗದ ವಸ್ತು ಎಂದು ತಿಳಿದರೆ ಸ್ಪರ್ಶದಿಂದ ಪತನವಾಗುತ್ತದೆ. ಎಲ್ಲಿ ಮನುಷ್ಯನ ಶರೀರ ಪವಿತ್ರ ಎಂಬ ಭಾವನೆ ಇದೆಯೋ ಅಲ್ಲಿ ಸ್ಪರ್ಶದಿಂದ ಉದ್ಧಾರವಾಗುತ್ತದೆ, ಉನ್ನತಿ ಆಗುತ್ತದೆ. ಆದ್ದರಿಂದಲೇ ಪವಿತ್ರ ಪುರುಷನ ಪಾದಸ್ಪರ್ಶ ಮಾಡು ಎಂದು ಹೇಳಿದಾರೆ. "ನಾನು ಮಲಿನನಾಗಿದೇನೆ. ಭಗವನ್, ನಿನ್ನ ಸ್ಪರ್ಶದಿಂದ ನನ್ನನ್ನು ಬಂಗಾರವಾಗಿ ಮಾಡು" ಎಂದು ದೇವರನ್ನು ಪ್ರಾರ್ಥಿಸುವುದಿಲ್ಲವೆ? **'ಸ್ಪರ್ಶಮಣೇ ಸುವರ್ಣೀಕುರು ಮಾಂ ಮಲಿನಂ ಲೋಹಂ.'** ಪ್ರತಿಯೊಬ್ಬ ಮನುಷ್ಯನೂ ಇನ್ನೊಬ್ಬನ ಪಾಲಿಗೆ ಸ್ಪರ್ಶಮಣಿಯಾಗಬೇಕು. ಇದು ಹ್ಯೂಮನ್ ಡಿಗ್ನಿಟಿ, ಸೇಕ್ರೆಡ್‌ನೆಸ್ ಆಫ್ ಲೈಫ್. ಪ್ರತಿಯೊಬ್ಬ ಮನುಷ್ಯನ ವಿಗ್ರಹ ಮತ್ತು ಅವನ ಶರೀರ ಭಗವಂತನ ಶರೀರದಷ್ಟೇ ಪವಿತ್ರವಾಗಬೇಕು.

ಪ್ರಜಾತಂತ್ರದಲ್ಲಿ ಆಧ್ಯಾತ್ಮಿಕತೆ ಎಲ್ಲಿ ಬರುತ್ತದೆಯೋ ಹೇಳುತ್ತಿದೇನೆ. ಇದೇ ಸ್ಪಿರಿಚುಯಾಲಿಟಿ. ಇದು ಆಧ್ಯಾತ್ಮಿಕತೆಯಲ್ಲ ಎಂದರೆ ಮನುಷ್ಯಸಂಪರ್ಕವನ್ನೇ ಬಿಡಬೇಕು. ಈ ಬಂಡೆಯನ್ನು ನೋಡಿದಾಗ ನಮಗೆ ಆನಂದವಾಗುತ್ತದೆ. ಇದರಲ್ಲಿ ದಿವ್ಯತೆ ಇದೆ ಎನ್ನುತ್ತೇವೆ. ಮನುಷ್ಯನಲ್ಲೋ? ಇಲ್ಲವೇನು? ಗುಡ್ಡದಲ್ಲಿ, ಕಲ್ಲಿನಲ್ಲಿ ದಿವ್ಯತೆ ಏಕೆ? ಅವು ಜಡ ಎಂದೆ? ನಿಮ್ಮ ಮೇಲೆ

ಅದರ ಜವಾಬದಾರಿ ಏನೂ ಇಲ್ಲ ಎಂದೆ? ಮನುಷ್ಯ ಮನುಷ್ಯರ ಸಂಬಂಧದಲ್ಲಿ, ಸಜೀವ ವಸ್ತು ಸಂಬಂಧದಲ್ಲಿ ಒಂದು ಜವಾಬದಾರಿ ಬರುತ್ತದೆ. ಈ ಸಂಬಂಧವೇ ಒಂದು ಜವಾಬದಾರಿ. ಆ ಜವಾಬದಾರಿಯೇ ಮನುಷ್ಯತ್ವ. ಕಲ್ಲುಗುಡ್ಡದಲ್ಲಿ ಜವಾಬದಾರಿಯಿಲ್ಲ. ಗಿಡಮರವಾದರೆ ಜವಾಬದಾರಿ ಬರುತ್ತದೆ. ಅದರಲ್ಲಿ ಜೀವ ಇದೆಯಲ್ಲ. ಭಗವಾನ್ ಶಿವಶಂಕರನು ದೇವದಾರು ವೃಕ್ಷವನ್ನು ತನ್ನ ಪುತ್ರನನ್ನಾಗಿ ಮಾಡಿಕೊಂಡನಂತೆ. ಏಕೆ? ಭಗವತಿ ಪಾರ್ವತಿ ತನ್ನ ಸ್ತನ್ಯ ಪಾನ ಮಾಡಿಸಿದಳು, ತನ್ನ ಬಂಗಾರದ ಕೊಡದಿಂದ ನೀರು ಹಾಕಿದಳು. **'ಸ್ಕಂದಸ್ಯ ಮಾತುಃ ಪಯಸಾಂ ರತಜ್ಞ.'** ಅದು ಸ್ಕಂದನ ತಾಯಿಯ ಹಾಲುಕುಡಿದ ಗಿಡ. ಜಾರ್ಜ್ ವಾಷಿಂಗ್‌ಟನ್‌ನ ಮನೆಯಲ್ಲಿ ಒಂದು ಚೆರ್‍ರಿ ಗಿಡ ಇತ್ತು. ಅವನ ತಂದೆ ಆ ಗಿಡವನ್ನು ಬಹಳ ಕಾಳಜಿಯಿಂದ ಪೋಷಿಸುತ್ತಿದ್ದ. ಜಾರ್ಜ್ ಹುಡುಗ. ಅವನ ಕೈಗೆ ಒಂದು ಕೊಡಲಿ ಸಿಕ್ಕಿತು. ತೋಟದಲ್ಲಿ ಆಡುತ್ತಿದ್ದ. ಕೊಡಲಿಯನ್ನು ಪ್ರಯೋಗಿಸುತ್ತ ಪ್ರಯೋಗಿಸುತ್ತ ಆ ಗಿಡವನ್ನೇ ಕಡಿದ. ಮರ ಉರುಳಿತು. ತಂದೆ ಅದನ್ನು ನೋಡಿ ಅತ್ತ. ಜಾರ್ಜ್‌ಗೆ ಚಿಂತೆಯಾಯಿತು. "ನಾನು ಹುಡುಗ. ಆಡುತ್ತಿದ್ದೆ. ಒಂದು ಮರ ಬಿತ್ತು. ಮರ ಬಿದ್ದರೆ ಅಪ್ಪ ಅಳಬೇಕೆ?' ಆ ಗಿಡದ ಮೇಲೆ ಅಷ್ಟು ಪ್ರೇಮವಿತ್ತು ತಂದೆಗೆ. ಆದ್ದರಿಂದಲೇ ಅಳು. ಮನುಷ್ಯ ಮನುಷ್ಯರಲ್ಲಿ ಎಷ್ಟು ಸಂಬಂಧ ಬೆಳೆದರೆ ಅಷ್ಟು ಪ್ರೇಮ ಹುಟ್ಟುತ್ತದೆ, ಅಷ್ಟು ಜವಾಬ್ದಾರಿಯೂ ಹೆಚ್ಚುತ್ತದೆ.

ಇತರರನ್ನು ನಮ್ಮ ಬಾಳಿನಲ್ಲಿ ಸೇರಿಸಿಕೊಳ್ಳುವುದು ಅಂದರೆ ಏನು ಎಂಬುದು ಈಗ ನಿಮಗೆ ತಿಳಿಯಬಹುದು. ಇದರ ಅರ್ಥ : ನಿಮ್ಮ ಜೀವನದ ಜವಾಬದಾರಿ, ನಿಮ್ಮ ನೆರೆಹೊರೆಯವರ ಜೀವನದ ಜವಾಬದಾರಿ ನಿಮ್ಮದು. ಇದೇ ಸದ್ಗುಣ, ಇದೇ ಚರಿತಾರ್ಥ. ತನ್ನ ಜೀವನದ, ತನ್ನ ನೆರೆಹೊರೆಯವರ ಜೀವನದ ಜವಾಬದಾರಿಯ ಭಾವನೆಯೆ ಸದ್ಗುಣ. ಇದೇ ಮಾನವತೆ. ಹಳೆಯ ಒಡಂಬಡಿಕೆಯಲ್ಲಿ ಒಂದು ಕಥೆ ಬರುತ್ತದೆ. ಆದಂಗೆ ಇಬ್ಬರು ಮಕ್ಕಳು – ಎಬೆಲ್, ಕೇನ್. ಕೇನ್ ಎಬೆಲನನ್ನು ಕೊಂದ. "ಏಕಪ್ಪ ಕೊಂದೆ" ಎಂದು ಕೇಳಿದರೆ ಅವನು ತಿರುಗಿ ಕೇಳಿದ, "ನಾನೇನು ಸೋದರನ ಸಂರಕ್ಷಕನೆ? ಕಾವಲುಗಾರನೆ?" ಆದಕ್ಕೆ ಉತ್ತರ : ಹೌದು ಪ್ರತಿಯೊಬ್ಬ ಮನುಷ್ಯನೂ ಇನ್ನೊಬ್ಬನ ಸಂರಕ್ಷಕನೇ. ಒಬ್ಬ ಇನ್ನೊಬ್ಬನ ಅಭಿಭಾವಕ. ಈ ಭಾವವನ್ನು ಗಾಂಧೀ ವಿಕಾಸಗೊಳಿಸಿದರು, ಗಾಂಧಿಯಂಥ ಬೇರೆಯವರೂ ವಿಕಾಸಗೊಳಿಸಿದರು.

ಗಾಂಧಿಯನ್ನು ಉಪಲಕ್ಷಣಾತ್ಮಕ ಎಂದು ತಿಳಿಯಿರಿ. ಏಕೆ? ಯುದ್ಧ – ರಾಜನೀತಿಗಳ ಕ್ಷೇತ್ರದಲ್ಲಿ ಅವರು ಈ ಭಾವನೆಯಿಂದ ಕೆಲಸ ಮಾಡಿದರು.

ಅಲ್ಲಿ ಈ ಭಾವನೆಗೆ ಪ್ರವೇಶ ಇರಲಿಲ್ಲ. ಪ್ರತೀಕಾರದಲ್ಲಿ, ರಾಜನೀತಿಯಲ್ಲಿ ಮಾನವತೆಗೆ ಪ್ರವೇಶವಿರಲಿಲ್ಲ. ಮಾನವತೆಯ ದಿವ್ಯ ಭಾವನೆಗೆ ಎಲ್ಲಿ ಅವಕಾಶ ಇರಲಿಲ್ಲವೋ ಅಲ್ಲಿ ಆ ಕ್ಷೇತ್ರದಲ್ಲಿ ಗಾಂಧೀ ಅದನ್ನು ಪ್ರವೇಶ ಮಾಡಿಸಿದರು. ಇದು ರಾಜಕೀಯದಲ್ಲಿ ಅಧ್ಯಾತ್ಮ. ಆದ್ದರಿಂದ ಗಾಂಧಿಯ ಹೆಸರು ಉಪ ಲಕ್ಷಣಾತ್ಮಕವಾಯಿತು, ಪ್ರತೀಕಾರಾತ್ಮಕವಾಯಿತು. ಈಗ ಇದು ಒಬ್ಬ ವ್ಯಕ್ತಿಯ ಹೆಸರಲ್ಲ, ಒಂದು ವಿಭೂತಿಯ ಹೆಸರು. ಗಾಂಧೀ ಅದರ ಪ್ರತೀಕ. ಇತರರನ್ನು ತನ್ನ ಬಾಳಿನಲ್ಲಿ ಬೆರೆಸಿಕೊಳ್ಳುವ ಈ ಜವಾಬದಾರಿಯ ಗುಣವೇ ಚಾರಿತ್ರ್ಯ, ಸದಾಚಾರ, ನೀತಿ. ಇದು ಮೂಲ ಮಾನವಧರ್ಮ. ಪ್ರಾಣಿ ಮಾತ್ರದ ಜವಾಬಾರಿಯನ್ನೂ ವಹಿಸಬಲ್ಲೆನಾದರೆ ಬಹಳ ಒಳ್ಳೆಯದು. ಇಲ್ಲವೇ, ಮನುಷ್ಯ ಮಾತ್ರದ ಸಂಕಲ್ಪವನ್ನಾದರೂ ಮಾಡು. ಆಗ ವಿಜ್ಞಾನವು ಮನುಷ್ಯನ ಆನಂದಕ್ಕೆ, ಗೌರವಕ್ಕೆ, ವಿಕಾಸಕ್ಕೆ ಕಾರಣ ವಾಗುತ್ತದೆ. ವಿಜ್ಞಾನವನ್ನು ಮನುಷ್ಯನ ಗೌರವ, ಆನಂದ, ಜೀವನವಿಕಾಸಗಳ ಸಾಧನವನ್ನಾಗಿ ಮಾಡಬೇಕಾದರೆ ಮನುಷ್ಯನಲ್ಲಿ ಈ ಭಾವನೆಯ ವಿಕಾಸವಾಗಬೇಕು,

ಸಂಖ್ಯೆಯನ್ನು ಅವಶ್ಯವಾಗಿ ತಿಳಿದುಕೊಳ್ಳಿ. ಸಂಖ್ಯೆಗಿಂತ ಹೆಚ್ಚಾಗಿ ಗುಣವನ್ನು ತಿಳಿದುಕೊಳ್ಳಿ. ಗುಣಕ್ಕೇ ಹೆಚ್ಚು ಮಹತ್ವ. ಗುಣವಿಲ್ಲದ ಸಂಖ್ಯೆ ಪ್ರಾಣವಿಲ್ಲದ ಕಳೇಬರ. ಬರೀ ಆಕಾರ ದೊಡ್ಡದು. ಆದರೆ ಕೆಲಸ ಸಾಗದು. ಸಂಖ್ಯೆಯೂ ಇದ್ದು ಗುಣವೂ ಇದ್ದರೆ ಬಹಳ ಒಳ್ಳೆಯದು. ಅಧಿಕಸ್ಯ ಅಧಿಕಂ ಫಲಂ. ಒಂದು ವೇಳೆ ಸಂಖ್ಯೆ ಇಲ್ಲದಿದ್ದರೂ ಕನಿಷ್ಠ ಪಕ್ಷ ಗುಣ ವನ್ನಾದರೂ ಕಾಪಾಡೋಣ. ಗುಣದ ಬೆಲೆಯನ್ನು ಸಂಖ್ಯೆಗೆ ಕೊಡಬಾರದು. ಬರೀ ಸಂಖ್ಯೆಗೆ ಗುಣದ ಬೆಲೆ ಕೊಟ್ಟರೆ ಎರಡೂ ಹಾಳಾಗುತ್ತವೆ. ಸಂಖ್ಯೆ ಪ್ರಾಣವಿಲ್ಲದ್ದು. ಗುಣ ಧ್ರುವವಾದುದು, ನಿತ್ಯವಾದುದು. ನಿತ್ಯ ವಸ್ತು ಯಾವಾಗಲೂ ಭಾವರೂಪದ್ದು. ಸಂಖ್ಯೆ ಭಾವರೂಪ ವಸ್ತುವಲ್ಲ. ಆಕಾರವೂ ಭಾವರೂಪವಲ್ಲ. ಗುಣ ವ್ಯಾಪಕ. ಅದರ ಜೊತೆಯಲ್ಲಿ ಬರುವ ಆಕಾರಕ್ಕೆ ಮಹತ್ವ ಬರುತ್ತದೆ. ಬರೀ ಸಂಖ್ಯೆಗೆ, ಬರೀ ಆಕಾರಕ್ಕೆ ಮಹತ್ವವಿಲ್ಲ.

ಆದುದರಿಂದ ಗಾಂಧೀಜೀ ಸಾಮುದಾಯಿಕ ಜೀವನವನ್ನೂ, ಸಾಮಾಜಿಕ ಜೀವನವನ್ನೂ ಪ್ರತಿಪಾದಿಸಿದರು. ಅದರ ಜೊತೆಯಲ್ಲಿ ಏನು ಹೇಳುತ್ತಿದ್ದರು? ಮೊದಲು ವೈಯಕ್ತಿಕ ಜೀವನದಲ್ಲಿ ಗುಣವಿಕಾಸ ಆಗಬೇಕು. ಗುಣ ಎಂದರೆ ಮಾನವತೆಯ ಗುಣ. ಇದು ಏನು? ಜವಾಬದಾರಿಯ, ಹೊಣೆಗಾರಿಕೆಯ ಭಾವನೆ. ಪಾರಸ್ಪರಿಕ ಆತ್ಮಹತ್ಯೆಯ ಬದಲು ಪಾರಸ್ಪರಿಕ ಸಹಜೀವಬಂತು.

ದೃಷ್ಟಿಯೇ ಬದಲಾಯಿತು. ಇಡೀ ಸಿದ್ಧಾಂತವೇ ಬೇರೆ ಆಯಿತು. ಈಗ ಇದನ್ನು ನಾವು ಸಮಾಜದ ಪ್ರತಿಯೊಂದು ಕ್ಷೇತ್ರದಲ್ಲಿಯೂ ಅನ್ವಯಿಸಬೇಕು: ಸಾಮಾಜಿಕ ಕ್ಷೇತ್ರ, ಆರ್ಥಿಕ ಕ್ಷೇತ್ರ, ರಾಜಕೀಯ ಕ್ಷೇತ್ರ, ಧರ್ಮದ್ದೇ ಒಂದು ಬೇರೆ ಕ್ಷೇತ್ರ, ಇದ್ದರೆ, ಅಲ್ಲೂ. ಜೀವನದಲ್ಲಿ ಅನೇಕ ಕ್ಷೇತ್ರಗಳಿವೆ ಎಂದು ತಿಳಿದಿದ್ದರು ಗಾಂಧೀ. ಆದರೆ ವಿಭಾಗಗಳಲ್ಲ. ಜೀವನದ ನಾನಾ ಕ್ಷೇತ್ರಗಳ ಮಾತು ಬೇರೆ, ವಿಭಾಗಗಳ ಮಾತೇ ಬೇರೆ. ಒಂದು ಉದಾಹರಣೆ ಕೊಡುತ್ತೇನೆ : ಕಮಲ. ಕಮಲಕ್ಕೆ ದಳಗಳಿವೆ. ಒಂದೊಂದೇ ದಳವನ್ನೂ ಎಸಳನ್ನೂ ಕಿತ್ತೊಗೆದರೆ ಕಡೆಗೆ ಉಳಿಯುವುದೇನು? ಕಮಲ. ಹೇಗೆ? ಆದರ ಎಸಳುಗಳಲ್ಲೂ ಸುಗಂಧ ಇದೆ. ಇನ್ನೊಂದು ಉದಾಹರಣೆ : ಎಲೆಕೋಸು. ಇವತ್ತು ಶಿಬಿರದಲ್ಲಿ ಎಲ್ಲರೂ ತರಕಾರಿ ಬಿಡಿಸಬೇಕು ಎಂದರು. ಕೋಸಿನ ಎಲೆ ಬಿಡಿಸಬೇಕು. ಒಂದೊಂದೇ ಎಲೆ ತೆಗೆದೆವು. ಎಲ್ಲಾ ಎಲೆಗಳನ್ನೂ ಬಿಡಿಸಿದೆವು. ಕೋಸು ಎಂಬ ಪದಾರ್ಥವೇ ಉಳಿಯಲಿಲ್ಲ. ಮನುಷ್ಯನ ವ್ಯಕ್ತಿತ್ವವೂ ಸ್ವಲ್ಪ ಹೀಗೇ ಆಗುತ್ತಿದೆ. ಮನುಷ್ಯನ ಸರ್ವಶಕ್ತಿಯನ್ನೂ ಕಳಚಿ ಹಾಕಿದರೆ? ಬ್ರಾಹ್ಮಣ್ಯವನ್ನು ತೆಗೆದು ಹಾಕಿದಿರಿ. ಕ್ಷತ್ರಿಯತ್ವವನ್ನು ಅಳಿಸಿದಿರಿ. ಭಾರತೀಯತ್ವವನ್ನು ಹೋಗಲಾಡಿಸಿದಿರಿ. ಕಾಂಗ್ರೆಸ್ಸಿಗತನವನ್ನು ತೊಡೆದು ಹಾಕಿದಿರಿ. ಅವನ ಬೇರೆ ಬೇರೆ ಗುಣಗಳನ್ನೇ ತೆಗೆದುಹಾಕಿದಿರಿ. ಆಮೇಲೆ ಏನೂ ಉಳಿಯಲಿಲ್ಲ. ಏಕೆ? ಮನುಷ್ಯತ್ವವೇ ಇರಲಿಲ್ಲ. ಯಾವುದು ಮೂಲಭೂತ ವಸ್ತುವೋ, ತಿರುಳೋ, ಮೂಲಸತ್ವವೋ ಅದೇ ಅವನಲ್ಲಿ ಇಲ್ಲ. ಕೋಸಿನ ಹಾಗೆ ಬರೀ ಎಲೆ. ಕೋಸು ಎಂಬ ವಸ್ತುವೇ ಇಲ್ಲ.

ಆದ್ದರಿಂದ ಬಾಳಿನಲ್ಲಿ ಎಷ್ಟು ಮುಖ ಇದೆಯೋ ಎಲ್ಲವೂ ಕಮಲದ ಹೂ ಹಾಗೆ ಒಂದೇ ಎಂದರು ಗಾಂಧೀ. ಇದೇ ಸಮಗ್ರತೆಯ ದೃಷ್ಟಿ. ಒಂದು ಪೃಥಕ್ಕರಣದ ದೃಷ್ಟಿ. ಬಾಳನ್ನು ಹೋಳು ಹೋಳು ಮಾಡುವ ದೃಷ್ಟಿ. ಇನ್ನೊಂದು ಸಮನ್ವಯಾತ್ಮಕ ದೃಷ್ಟಿ, ಸಮಗ್ರತೆಯ ದೃಷ್ಟಿ. ಈ ಸಮಗ್ರತೆಯಲ್ಲಿ ವ್ಯಕ್ತಿಯೂ ಪೂರ್ಣ, ಸಮುದಾಯವೂ ಪೂರ್ಣ. ವ್ಯಷ್ಟಿಯೂ ಪೂರ್ಣ ಸಮಷ್ಟಿಯೂ ಪೂರ್ಣ. ಪ್ರತಿಯೊಬ್ಬ ಮನುಷ್ಯನ ವಿಭೂತಿಯೂ ಪೂರ್ಣ. ಎಲ್ಲ ಮನುಷ್ಯರ ವಿಭೂತಿಗಳ ಸಂನಿಕರ್ಷ ಇರುವೆಡೆ ಸಮಾಜವೂ ಪೂರ್ಣ. 'ಪೂರ್ಣಮದಃ ಪೂರ್ಣಮಿದಂ' ಎನ್ನುತ್ತಾರೆ. ಪ್ರತಿಯೊಬ್ಬ ಮನುಷ್ಯನೂ ಪೂರ್ಣ, ಸಮಗ್ರ ವಸ್ತು, ಅಂಶವಲ್ಲ. ★

(ಮುಂದುವರಿಯುವುದು)

ವಿಚಾರ ದೀಪ್ತಿ....................

ಭರ್ತೃಹರಿಗೆ ಅವಸಾನಕಾಲ ಬಂದಿತೆಂದು ತೋರುತ್ತದೆ. ಆಗ ಕೈಮುಗಿದು ಹೇಳುತ್ತಾನೆ. "ಓ ಭೂಮಾತೆಯೆ, ತಂದೆಯಾದ ಓ ವಾಯುವೆ, ಸ್ನೇಹಿತನಾದ ಅಗ್ನಿಯೇ, ಬಂಧು ಪ್ರಾಯವಾದ ಜಲವೆ, ಸೋದರನೋಪಾದಿಯಲ್ಲಿ ಸಂರಕ್ಷಣೆ ಮಾಡುವ ಆಕಾಶವೆ ನಿಮಗೆಲ್ಲ ಇಗೋ ಇದು ಕಡೆಯ ನಮಸ್ಕಾರ."

"ನಿಮ್ಮೆಲ್ಲರ ಸಹವಾಸದಿಂದ ನನಗೆ ಪುಣ್ಯ ಬಂತು. ಆ ಪುಣ್ಯದಿಂದ ವಿಸ್ತಾರವೂ ಪ್ರಕಾಶಮಾನವೂ ಆದ ನಿರ್ಮಲ ತತ್ವಜ್ಞಾನ ನನಗೆ ಲಭಿಸಿತು."

ಲೋಕಸಂಪರ್ಕವಾಗುತ್ತಾಗುತ್ತಾ ಭ್ರಾಂತಿಗಳು, ಮೋಹಗಳು ಎಲ್ಲ ಬಿಟ್ಟುಹೋಗುತ್ತವೆ. ಲೋಕ ಸಂಪರ್ಕ ದಿಂದ ಪದಾರ್ಥಗಳ ಬೆಲೆ ಇಷ್ಟೆ ಎಂಬ ಜ್ಞಾನ ಬರುತ್ತದೆ. ಹೀಗೆ ನಮ್ಮ ವ್ಯಾಮೋಹಗಳೆಲ್ಲ ಒಂದೊಂದಾಗಿ ಕಳಚುತ್ತವೆ. ಇದು ಲೋಕಾನುಭವದಿಂದ ನಮಗಾಗುವ ಪರಮ ಪ್ರಯೋಜನ, ನಮ್ಮ ಜೀವನಕ್ಕಾಗಬೇಕಾದ ಸಂಸ್ಕಾರದ ಒಂದಾನೊಂದು ರೂಪ ಲೋಕಸಂಪರ್ಕ. ಘೋರ ಸಂಸ್ಕಾರಗಳಿಂದಾಗತಕ್ಕ ಚಿತ್ತಶುದ್ಧಿಗಿಂತ ಉತ್ತಮವಾದ ಚಿತ್ತಶುದ್ಧಿಯೂ, ಭ್ರಾಂತಿ ನಿವಾರಣೆಯೂ ಪ್ರಪಂಚ ಸಂಪರ್ಕದಿಂದ ಆಗುತ್ತದೆ. ಈ ಕಾರಣದಿಂದ ಕರ್ಮ ಬಹಳ ಮುಖ್ಯವಾದ ಸಾಧನವಾಗುತ್ತದೆ, ಮನುಷ್ಯ ಎಂದರೆ ಕರ್ಮ.

–ಡಿ.ವಿ.ಜಿ.

ಕ್ರಿಯಾತ್ಮಕ ಶಿಕ್ಷಣದ ಲಾಭಗಳು

– ಆಚಾರ್ಯ ಕೃಪಲಾನಿ

(ಶಿಕ್ಷಣ ಕ್ಷೇತ್ರ ಎಂದಿನಿಂದಲೂ ವಿಮರ್ಶೆಗೆ ಒಳಗಾಗುತ್ತ ಬಂದಿರುವಂಥದು. ಶಿಕ್ಷಣವು ಅನ್ನ ಕಾಯಕದ ಸುತ್ತ ಇರಬೇಕೆಂಬ ಗಾಂಧೀಜಿಯವರ ವಿಚಾರದ ಬೆಳವಣಿಗೆಯನ್ನು ಕೃಪಲಾನಿಯವರು ಇಲ್ಲಿ ದಾಖಲಿಸಿದ್ದಾರೆ. ಗುರಿ ಮತ್ತು ಗುರು ಇಲ್ಲದ ಇಂದಿನ ಶಿಕ್ಷಣ ಪದ್ಧತಿಗೆ ವಿರುದ್ಧವಾಗಿ ಅನ್ನಕಾಯಕದ ಶಿಕ್ಷಣವು ಇಂದಿಗೂ ಪ್ರಸ್ತುತವಾಗಿದೆಯೆಂಬುದು ೬೨ ವರ್ಷಗಳ ಹಿಂದೆ ೧೯೩೭ ರಲ್ಲಿ ಗಾಂಧೀಜಿ ಹೇಳಿದ್ದರೆಂಬುದು ಆ ವಿಚಾರದ ಆಕರ್ಷಣೆ. ಇಲ್ಲಿ ಆ ವಿಚಾರಗಳನ್ನು ಕ್ರಮಶಃ ಕೊಡಲಾಗುತ್ತಿದೆ. ಇದು ಮೂರನೇಯ ಕಂತು ಸಂ.)

ಕೈಗೆಲಸದ ಮೂಲಕ, ಕೈಗಾರಿಕೆಯ ಮೂಲಕ ಶಿಕ್ಷಣ ನಡೆಯಬೇಕು ಎಂದು ಗಾಂಧೀಜಿಗೆ ಸ್ವತಂತ್ರವಾಗಿ ತೋರಿತು. ಅವರಿಗಿಂತ ಹಿಂದಿದ್ದ ಕೆಲಸಗಾರರ, ವಿಚಾರಕರ ಸಂಪರ್ಕವಿಲ್ಲದೆಯೇ ಗಾಂಧೀಜಿಗೇ ಈ ವಿಚಾರ ಸ್ವತಂತ್ರವಾಗಿ ಹೊಳೆದುದನ್ನು ನೋಡಿದರೆ ಜೀವನಕ್ಕೆ ಅದು ಎಷ್ಟು ಹತ್ತಿರವೆಂಬುದು ತಿಳಿಯುತ್ತದೆ. ಶಿಕ್ಷಣದ ಇತಿಹಾಸದಲ್ಲಿ ಈ ವಿಚಾರ ನೂತನವೂ ಅಲ್ಲ, ಕ್ರಾಂತಿಕಾರಿಯೂ ಅಲ್ಲ. ನಮ್ಮ ಗೆಳೆಯರು ಪ್ರಾರಂಭದಲ್ಲಿ ಹೇಳಿದಂತೆ ಇದು ಪ್ರತಿಗಾಮಿಯೂ ಅಲ್ಲ. ಆಗಾಗ ಈ ವಿಚಾರ ಪ್ರತಿಪಾದಿತವಾಗುತ್ತಲೇ ಇದೆ. ಈ ಬಗ್ಗೆ ಹಲವು ಗಮನಾರ್ಹ ಪ್ರಯತ್ನಗಳೂ ನಡೆದಿದೆ.

೧೪–೧೫ ವರ್ಷ ವಯಸ್ಸಿನವರೆಗೆ ಪ್ರತ್ಯಕ್ಷ ಗೋಚರವಾಗುವ ವಿಷಯಗಳನ್ನು ಗ್ರಹಿಸುವ ಶಕ್ತಿ ಮಕ್ಕಳಲ್ಲಿ ವಿಶೇಷವಾಗಿ ಇರುತ್ತದೆ. ತತ್ವವನ್ನು, ಸೂತ್ರಗಳನ್ನು ಗ್ರಹಿಸುವ ಸಾಮರ್ಥ್ಯ ಕಡಿಮೆ. ಬಹಳ ಪರಿಮಿತ. ಯಾವುದಾದರೂ ತತ್ವ ಅವನಿಗೆ ಅರ್ಥವಾದರೆ ಅದು ವಾಸ್ತವ ವಿಷಯಗಳಿಗೆ ನಿಕಟವಾಗಿ ಸಂಬಂಧಿಸಿರಬೇಕು. ಆದುದರಿಂದ ಮಗು ವಾಸ್ತವದ, ಸಾಕಾರದ ಮೂಲಕ ಕಲಿಯುತ್ತದೆ. ಪುಸ್ತಕಗಳ ಮೂಲಕ, ಪಾಠದ ಮೂಲಕ ಅವನ ಮನಸ್ಸಿನೊಳಗೆ ತತ್ವವನ್ನೂ, ಶಾಸ್ತ್ರವನ್ನೂ ತುರುಕಿದರೆ ಅದು ಶಿಶುಸ್ವಭಾವಕ್ಕೆ, ಮಕ್ಕಳ ಮನೋಧರ್ಮಕ್ಕೆ ವಿರುದ್ಧ; ಮಕ್ಕಳು ಕಲಿಯುವ ರೀತಿ ತಲೆಕೆಳಗಾದಂತೆ, ಅದರಿಂದ ಮಗು ಜಡವಾಗುತ್ತದೆ. ಆದುದರಿಂದ ಮಕ್ಕಳ ಶಿಕ್ಷಣವನ್ನು ಸಾಕಾರದ ಮತ್ತು ವಾಸ್ತವದ ಲೋಕಕ್ಕೆ ತಂದು ಮಕ್ಕಳ ಮನೋಧರ್ಮ ಶಿಶು ಮತ್ತು ಮನಶ್ಶಾಸ್ತ್ರಗಳಿಗೆ ಹೊಂದಿಕೊಳ್ಳುವಂತೆ ಮಾಡುವ ಪ್ರಯತ್ನ ನಡೆದಿವೆ. ಗಾಂಧೀಜಿ ಇದನ್ನು ಪ್ರಕಟಗೊಳಿಸಿದಾಗ ಹಿಂದುಸ್ತಾನದ ಶಿಕ್ಷಣ ಪಂಡಿತರು ಶಿಕ್ಷಣಶಾಸ್ತ್ರದ ಈ ಮಹಾತತ್ವವನ್ನು ಗ್ರಹಿಸಲಿಲ್ಲ ಎಂದರೆ

ಅವರಿಗೆ ವಿಶೇಷ ಪಾಂಡಿತ್ಯವಿದೆ ಎಂಬುದರಲ್ಲೇ ಅವರಿಗೆ ಶಾಸ್ತ್ರಜ್ಞಾನ ಕಡಿಮೆ ಎಂದಾಯಿತು. ಆದುದರಿಂದ ಅವರು ಮರೆತಿರವುದನ್ನು ಇಲ್ಲಿ ಕೊಂಚ ನೆನಪು ಮಾಡಿಕೊಡುವುದು ಅಪ್ರಸ್ತುತವಾಗಲಾರದು.

ಆದಿಕಾಲದಲ್ಲಿ ಸಮಸ್ತ ಶಿಕ್ಷಣವೂ ಪ್ರತ್ಯಕ್ಷ ನಿರೀಕ್ಷಣೆ, ಕೆಲಸಗಳ ಮೂಲಕವೇ ನಡೆಯುತಿತ್ತು. ಆಗ ಜೀವನವೇ ಕರ್ಮಮಯ. ಅದರಲ್ಲೂ ಶಾರೀರಕ ಕರ್ಮಮಯ. ಮೇಲಿನ ವರ್ಗದ ಪುರೋಹಿತ, ದೊರೆ, ಶ್ರೀಮಂತರು ಶರೀಶ್ರಮದ ಮೂಲಕವೇ ತಮ್ಮ ಸ್ಥಾನರಕ್ಷಣೆ ಮಾಡಿಕೊಳ್ಳಬೇಕಾಗಿತ್ತು. ಬೇಟೆಗಾರಿಕೆ, ಮೀನುಗಾರಿಕೆ, ಬೇಸಾಯಗಾರಿಕೆಯ ನಾಗರಿಕತೆಗಳಲ್ಲಿ ಬರವಣಿಗೆಯೇ ಗೊತ್ತಿಲ್ಲದಿರುವಾಗ ಇದ್ದ ಕಿಂಚಿತ್ ಜ್ಞಾನವನ್ನು ಕ್ರಿಯೆ, ಅನುಭವಗಳ ಮೂಲಕವೇ ಕಷ್ಟಪಟ್ಟು ಗಳಿಸಬೇಕಾಗಿತ್ತು. ಆಗ ಕಲಿಯಲು ಬಂದ ಹುಡುಗರು ಈಗಿನ ವಿದ್ಯಾರ್ಥಿಗಳ ತೆರದವರಲ್ಲ, ಅಭ್ಯಾಸಿಗಳು. ಗುರುಗಳ ಜೊತೆಯಲ್ಲಿ, ಅವರ ಮಠ–ಆಶ್ರಮಗಳಲ್ಲಿ ವಾಸವಾಗಿದ್ದು ಆ ಸಂಸ್ಥೆಯ, ತಮ್ಮ ಗುರುಗಳ ಸಮಸ್ತ ಕೆಲಸವನ್ನೂ ತಾವೆ ಮಾಡುತ್ತಿದ್ದರು. ಆದುದರಿಂದ ಅವರ ಜ್ಞಾನಕ್ಕೆ ವಾಸ್ತವತೆ, ಪ್ರತ್ಯಕ್ಷತೆ ಆಧಾರವಾಗಿತ್ತು. ಬಾಹ್ಯವಸ್ತುಗಳಿಗೆ ಹೊಂದಿಕೊಂಡಿತ್ತು. ಆ ಜ್ಞಾನ ಎಷ್ಟೇ ಉನ್ನತವಾಗಿ ಏರಿದರೂ ಅದರಲ್ಲಿ ಆಗ ತಾನೆ ಅಗೆದ ಹಸಿಮಣ್ಣಿನ ಗಂಧ ಸೂಸುತ್ತಿತ್ತು. ಇವೊತ್ತು ಅತ್ಯುಚ್ಚತರ ತತ್ವಗಳನ್ನು ಪ್ರತಿಪಾದಿಸುವ ಧರ್ಮದ ವ್ರತ ನಿಯಮ ಉತ್ಸವಗಳೆಲ್ಲವೂ ವ್ಯಾವಹಾರಿಕ ರೂಪದವು. ಅದರ ಯೋಗವೂ ಕಾರ್ಯಮಯವಾದ ಕರ್ಮಯೋಗ.

ಮಧ್ಯ ಯುಗದಲ್ಲಿ ಇದೆಲ್ಲವೂ ಬದಲಾಯಿತು, ಈ ವೇಳೆಗೆ ಧರ್ಮದ ಸ್ವರೂಪ ವ್ಯಕ್ತದಿಂದ ಅವ್ಯಕ್ತದ ಕಡೆ ಹರಿಯಿತು. ಅಧ್ಯಯನ ಮಾಡುವವರೇ ಒಂದು ವರ್ಗವಾದರು. ಧಾರ್ಮಿಕ ರಹಸ್ಯಗಳೇ ಅಲ್ಲದೆ ಸಮಸ್ತ ಜ್ಞಾನವೂ ಅದರಲ್ಲಿಯೇ ಸೇರಿಕೊಂಡಿತು. ಶಿಕ್ಷಣವೆಲ್ಲವೂ ಪುರೋಹಿತರ ಕೈಸೇರಿತು. ಅದೆಲ್ಲ ತಾತ್ವಿಕವಾಗಿ ಕೇವಲ ಶಬ್ದ ವಿಚಾರಗಳಲ್ಲಿ ಅಡಗಿಹೋಯಿತು. ಬಹುಶಃ ಇದು ಸ್ವಾಭಾವಿಕವೇನೋ. ಆದರೆ ಉದ್ದೇಶ್ಯ ಮಧ್ಯ ಯುಗಕ್ಕೆ ತಕ್ಕ ಕರಣಿ ಕರನ್ನು ಅಣಿಮಾಡುವುದು. ಈಗಿನಂಥಗುಮಾಸ್ತರನಲ್ಲ ಅಧ್ಯಾಪಕ, ಪುರೋಹಿತ, ವೈದ್ಯ, ವಕೀಲ, ಆ ಮೇಲಿನ ಕಾಲದಲ್ಲಿ ರಾಜಕಾರಣಿ, ವಿದ್ಯೆ ಕಲಿತು ಮಾಡಬೇಕಾದುದೆಲ್ಲವನ್ನೂ ಪುರೋಹಿತವರ್ಗ ಅಥವಾ ಬ್ರಾಹ್ಮಣರು ಮಾಡುತ್ತಿದ್ದರು. ಪೂರ್ವದೇಶದಲ್ಲಾಗಲಿ ಪಶ್ಚಿಮ ದೇಶದಲ್ಲಾಗಲಿ ಪುರೋಹಿತರು ಕಲಿಸುವ ವಿದ್ಯೆ ಸಾಮಾನ್ಯವಾಗಿ ತಾತ್ವಿಕ, ಸಾಂಪ್ರದಾಯಿಕ ಆಗುವ ಸಂಭವ ಹೆಚ್ಚು. ಧರ್ಮದಲ್ಲಿ ಮಾನವನ ಮನಸ್ಸಿನ ಉನ್ನತೋನ್ನತ ತಾತ್ವಿಕ ವಿಚಾರದ

ಪ್ರಸಕ್ತಿಯಿದೆ. ಆಧ್ಯಾತ್ಮ ಜೀವನದ ಮೇಲೆ ಸಂನ್ಯಾಸ, ತಾಪಸ ವೃತ್ತಿಗಳ ಪ್ರಭಾವ ಬಿದ್ದರೆ ವಾಸ್ತವ, ವ್ಯಕ್ತ ಆದುದೆಲ್ಲ ಕೆಳಗಿನ ಸ್ಥಾನಕ್ಕೆ ಇಳಿಯು ಬೇಕಾದುದೇ. ಏಕಾಂತವಾಸ, ಧ್ಯಾನಗಳೇ ಪರಮೋಚ್ಚ ಜೀವನವೆನಿಸಿ ಉಳಿದುದೆಲ್ಲ ಐಹಿಕ, ಪ್ರಾಪಂಚಿಕ ಎನಿಸಿಕೊಳ್ಳುತ್ತದೆ. ರೈತ, ಕೈಗೆಲಸಗಾರ, ಕೂಲಿಗಾರ ಎಲ್ಲರೂ ಜಡ ಪ್ರಕೃತಿಯ ಜೊತೆಯಲ್ಲಿ ಕೆಲಸ ಮಾಡುತ್ತಾರೆ, ಪ್ರಾಪಂಚಿಕ ಜೀವನ ನಡೆಸುತ್ತಾರೆ ಆದುದರಿಂದ ಅವರ ಜೀವನ ಕೀಳು, ಧ್ಯಾನ-ತಪಸ್ಸುಗಳ ಜೀವನವೇ ಅತ್ಯುತ್ತಮ ಅನಿಸಿತು. ಗೌರವದಲ್ಲಿ ಎರಡನೆಯದು ಕ್ಷತ್ರಿಯನ ಬಾಳು. ಕ್ರೌರ್ಯಪೂರ್ಣ ಹಿಂಸಾಮಯ ಯುಗದಲ್ಲಿ ಇದು ನಿರೀಕ್ಷಿತವೇ. ಆಗಲೂ ಪುರೋಹಿತವರ್ಗಕ್ಕೂ ಯೋಧವರ್ಗಕ್ಕೂ ತಾನು ಮೇಲು ತಾನು ಮೇಲು ಎಂಬ ಹೋರಾಟವಿದ್ದೇ ಇತ್ತು. ಈ ಕಲಹದಲ್ಲಿ ಕಟ್ಟಕಡೆಗೆ ಪೂರ್ವದೇಶದಲ್ಲಿ ಪುರೋಹಿತ ಗೆದ್ದ, ಪಶ್ಚಿಮ ದೇಶದಲ್ಲಿ ಯೋಧ ಗೆದ್ದ.

ಪುರೋಹಿತನ ನೇತೃತ್ವದಲ್ಲಿ ನಡೆದ ವಿದ್ಯಾಭ್ಯಾಸ ತತ್ವಪ್ರಧಾನವಾದುದರಿಂದ ಅದರಲ್ಲಿ ಶಬ್ದವೇ ಪ್ರಧಾನ, ವಸ್ತು-ಪದಾರ್ಥಗಳು ಗೌಣ. ಪ್ರಾಪಂಚಿಕ ಜೀವನದ ಸುಖಸಂತೋಷಗಳನ್ನು ತಿರಸ್ಕರಿಸಿ ಆ ವಿದ್ಯಾಭ್ಯಾಸ ಉಲ್ಲಾಸರಹಿತ ಶುಷ್ಕಗಂಭೀರ ಆಗುತ್ತದೆ. ಪುರೋಹಿತವರ್ಗ ನಿರ್ಮಿಸಿದ ಸಾಹಿತ್ಯ ಈ ಮಾತಿಗೆ ಧಾರಾಳವಾಗಿ ಪ್ರಮಾಣವನ್ನೂ ಒದಗಿಸಿದೆ. ಆ ಕಾಲದ ವಿದ್ವತ್ಸಭೆಗಳ ಶಾಸ್ತ್ರಾರ್ಥ, ತರ್ಕಗಳ ಧೋರಣೆಯಿಂದಲೂ ತಿಳಿಯುತ್ತದೆ. ಪ್ರತಿಯೊಂದನ್ನೂ ಶಬ್ದಗಳ ಮೂಲಕ ಸಿದ್ಧಮಾಡಬೇಕು ಇಲ್ಲವೆ ತಿರಸ್ಕರಿಸಬೇಕು. ಪ್ರಕೃತಿಯನ್ನೂ ವಾಸ್ತವ ಪದಾರ್ಥಗಳನ್ನೂ ಇದಿರಿಗಿಟ್ಟರೆ ವಿವಾದವೇ ಮುಗಿಯುತ್ತಿತ್ತು. ಆದರೆ ಅಂಥ ಪದ್ಧತಿಯಿರಲಿಲ್ಲ. ತರ್ಕದಿಂದ, ಲಕ್ಷಣ ನಿರೂಪಣೆಯಿಂದ, ವಿಶ್ಲೇಷಣಯಿಂದಲೇ ಸಿದ್ಧಾಂತವನ್ನು ಪ್ರತಿಪಾದಿಸಬೇಕು. ಆಧುನಿಕ ಮನಸ್ಸಿಗೆ ಎಷ್ಟೋ ಸಲ ಹಿಂದಿನ ಈ ವಾದ ವಿವಾದಗಳೆಲ್ಲ ಬರೀ ಹುಡುಗಾಟ, ನಿರರ್ಥಹೀನ ಎನಿಸುತ್ತದೆ. ಶಬ್ದಗಳ ಪ್ರಯೋಗ, ಅರ್ಥ ನಿಷ್ಪತ್ತಿಗಳಲ್ಲಿ ಬಹಳ ಜಾಣತನ ಕಾಣುತ್ತದೆ. ಶಬ್ದಗಳನ್ನು ಹಿಗ್ಗಾಮುಗ್ಗಾ ಎಳೆವ ಜಾಣ್ಮೆಯೂ ಇದೆ. ಆದರೆ ವ್ಯಾವಹಾರಿಕ ದೃಷ್ಟಿಯ, ವೈಜ್ಞಾನಿಕ ರೀತಿಯ ಮನಸ್ಸಿಗೆ ಆ ವಾದವೆಲ್ಲವೂ ಅರ್ಥವಿಲ್ಲದುದು. ಸರಿಯಲ್ಲದುದನ್ನು ಸರಿಯಾಗಿ ಕಾಣುವಂತೆ ಮಾಡುವುದಕ್ಕೇ ಆ ಪ್ರಯತ್ನವೆಲ್ಲಾ.

ಪ್ರತ್ಯಕ್ಷ ಅನುಭವದಲ್ಲಿದೆ ವಿಚಾರದ ಬೇರು. ಆ ಬೇರನ್ನು ಕಡಿದು ಹಾಕಿದ ಮೇಲೆ ತರ್ಕಬಲದಿಂದ ಅವಾಸ್ತವ ಸಿದ್ಧಾಂತಗಳನ್ನು ಎಷ್ಟು ಬೇಕಾದರೂ ಸಮರ್ಥಿಸಲೂಬಹುದು, ನಿರಾಕರಿಸಲೂಬಹುದು. ಉದಾಹರಣೆಗೆ: ಆಮೆ ಮುಂದೆ ಬಿದ್ದ ಮೇಲೆ ಮೊಲ ಎಷ್ಟೇ ಓಡಲಿ ಗೆಲ್ಲಲಾರದು, 'ಕಾರ್ಯಕಾರಣ ಸಂಬಂಧ; ಕಾಲದೇಶ

ಪದಾರ್ಥ. ಬಾಹ್ಯಸೃಷ್ಟಿ ಕೂಡ ಇಲ್ಲವೇ ಇಲ್ಲ; 'ನಾವು ನೋಡುವುದೆಲ್ಲ ಮಾಯೆ ಒಳಗಿನ ವಿಚಾರದ ಬರೀ ರೂಪು.; 'ಆ ವಸ್ತುವೇ ಅಜ್ಞೇಯ, ತಿಳಿವಿಗೆ ಮೀರಿದುದು.; ಆದರ್ಶವೊಂದೇ ಸತ್ಯ; ಪರಮೇಶ್ವರ ಸಾಕಾರನೂ ಹೌದು, ನಿರಾಕಾರನೂ ಹೌದು; ಕ್ರಿಸ್ತನ ಪುನರುತ್ಥಾನ ಸಶರೀರ; ಬೈಬಲಿನ ರೊಟ್ಟಿ ದ್ರಾಕ್ಷಾರಸಗಳು ವಾಸ್ತವವಾಗಿ ಮಾಂಸ ರಕ್ತ ಆದವು; ಕ್ರಿಸ್ತ್ಯಾನರದಾಗಲಿ, ಹಿಂದೂ ಗಳದಾಗಲಿ ತ್ರಿಮೂರ್ತಿಗಳು ಮೂವರಲ್ಲ ಒಂದೇ ಮೂರ್ತಿ." ಇತ್ಯಾದಿ ತರ್ಕದಿಂದ ಸಿದ್ಧಗೊಳಿಸಿದ, ಖಂಡಿಸಿದ ಸರಳ ವಿಚಾರಗಳು ಇವು. ಈ ಪದ್ಧತಿಯಿಂದ ಜ್ಞಾನವು ವಾಸ್ತವಿಕತೆಯ ಆಧಾರವನ್ನು ಕಳೆದುಕೊಂಡು ಮಾನಸಿಕವಾಯಿತು. ಕೆಲವು ತಾತ್ವಿಕ ಸೂತ್ರಗಳು, ತಾರ್ಕಿಕ ಸಿದ್ಧಾಂತಗಳು ಜಾಣತನವನ್ನು ತೋರಿಸಬಹುದು. ಆದರೆ ಅದರಲ್ಲಿ ಹುರುಳಿಲ್ಲ, ಬರೀ ಗಾಳಿಗಂಟು. ಈ ಕ್ರಮದಿಂದ ಕಟ್ಟಕಡೆಗೆ ಬರೀ ಒಣ ಪಾಂಡಿತ್ಯವೇ ಫಲ. ಈ ದೇಶದಲ್ಲೂ, ಬೇರೆ ದೇಶಗಳಲ್ಲೂ ಮಧ್ಯಯುಗದ ಶುಷ್ಕಪಾಂಡಿತ್ಯವು ಸ್ವತಂತ್ರ ವಿಚಾರವನ್ನೂ, ಅಭಿಪ್ರಾಯವನ್ನೂ ಹಿಸುಕಿಹಾಕಿ ಜ್ಞಾನದ ಪ್ರಗತಿಗೆ ಅಡ್ಡಗಟ್ಟಿತು. ಬೇಗನೆ ಅರ್ಥವಾಯಿತು ಜಗತ್ತಿಗೆ; ಜ್ಞಾನ ಬೆಳೆಯ ಬೇಕೆಂದರೆ ಅನುಮಾನ, ಕಲ್ಪನೆಗಳನ್ನು ತಗ್ಗಿಸಿ ಅನುಗಮನ, ವಾಸ್ತವ ಆಗಬೇಕು, ಎಲ್ಲಕ್ಕಿಂತ ಹೆಚ್ಚಾಗಿ ಜ್ಞಾನ ಕ್ರಿಯಾತ್ಮಕ, ರಚನಾತ್ಮಕ ಆಗಬೇಕೆಂಬುದು ಸ್ಪಷ್ಟವಾಯಿತು.

ಮಧ್ಯಯುಗದ ಮಠ–ಆಶ್ರಮಗಳ ಈ ಸಾಂಪ್ರದಾಯಿಕ ಶಿಕ್ಷಣದಲ್ಲಿ ವಾಸ್ತವಿಕತೆ, ಪ್ರಕೃತಿ ಸಂಬಂಧ ಪೂರಾ ತಪ್ಪದಿರಲು ಕಾರಣ ಆ ಕಾಲದ ಗ್ರಾಮಸಂಸ್ಕೃತಿಯಲ್ಲಿ ಅದರಲ್ಲಿಯೂ ಸ್ವಯಂ ಶಾಸಿತ ಸ್ವಾವಲಂಬಿ ಧಾರ್ಮಿಕ ಸಂಸ್ಥೆಗಳಲ್ಲಿ ಪ್ರಕೃತಿ ಸಂಪರ್ಕ ಯಥೇಚ್ಛವಾಗಿದ್ದುದು; ಜೀವನದ ದೈನಂದಿನ ಆವಶ್ಯಕತೆಗಳಿಗಾಗಿಯೂ, ಸಂಸ್ಥೆಗಳ ಪೋಷಣೆ ಗಾಗಿಯೂ ಶರೀರಶ್ರಮವನ್ನು ಮಾಡಬೇಕಾಗಿದ್ದುದು. ಈ ಕಾರ್ಯಕಲಾಪ ಗಳ ದೆಸೆಯಿಂದ ಶಿಕ್ಷಣ ಗೊಡ್ಡು ಸಾಂಪ್ರದಾಯಿಕತೆ, ಬರೀ ಬೌದ್ಧಿಕತೆಗಳ ದುಷ್ಪರಿಣಾಮವನ್ನು ತಪ್ಪಿಸಿಕೊಂಡಿತು. ಇದಲ್ಲದೆ ಶಿಕ್ಷಣಕ್ಕೆ ಧಾರ್ಮಿಕ ಉದ್ದೇಶ್ಯ ವಿದ್ದುದರಿಂದ ರಸಭಾವನೆಗಳನ್ನೂ, ಕಲಾಭಿರುಚಿಯನ್ನೂ, ಕ್ರಿಯಾಶಕ್ತಿಯನ್ನೂ ವಿಕಾಸಗೊಳಿಸದೆ ಇರಲು ಸಾಧ್ಯವಿರಲಿಲ್ಲ. ಆದರೂ ಶಿಕ್ಷಣ ಪ್ರಧಾನವಾಗಿ ಸಾಂಪ್ರದಾಯಿಕ, ಬೌದ್ಧಿಕವಾಗಿಯೇ ಇತ್ತು. ಆ ಕಾರಣದಿಂದ ನಿರ್ಜೀವ ಆಗಿತ್ತು.

ಪುರಾತನ ಗ್ರೀಸ್ ದೇಶದಲ್ಲಿಯೂ ಒಂದು ಕಾಲದಲ್ಲಿ ಹೀಗೆಯೇ ಪ್ರಜ್ಞಾ ವಾದದ ಭಾರದಿಂದ ಜ್ಞಾನ ತಿಣಿಕಿತ್ತು. ಬರೀ ತರ್ಕ, ವಾದ, ಚರ್ಚೆಗಳಲ್ಲೆ ಪರ್ಯಾವ

ಸಾನವಾಯಿತು. ನಾಲ್ಕು ಸೂತ್ರ, ನಾಲ್ಕು ಸಿದ್ಧಾಂತ ತಿಳಿದರೆ ಸಮಸ್ತ ಜ್ಞಾನವೂ ಕರಗತವಾದಂತೆ. ಆದುದರಿಂದ ಆಗ ಅತ್ಯಂತ ಶ್ರದ್ಧೆಯಿಂದ ಅಭ್ಯಾಸ ಮಾಡುತ್ತಿದ್ದ ಶಾಸ್ತ್ರ ತರ್ಕಶಾಸ್ತ್ರ. ಇದನ್ನು ತಿದ್ದಿ ಪ್ರಕೃತಿಯ ಕಡೆ, ವಾಸ್ತವಿಕತೆಯ ಕಡೆ ತಿರುಗಿಸಲು ಸಾಕ್ರೆಟೀಸ್ ಯತ್ನಿಸಿದ. ಆದರೆ ಅವನ ಶಿಷ್ಯರು ನಿರ್ಮಿಸಿಟ್ಟ ಸಾಕ್ರೆಟೀಸ್ ಚತುರ ತಾರ್ಕಿಕ, ಅದ್ಭುತ ಪ್ರಜ್ಞಾವಾದಿ ಆಗಿದಾನೆ. ಆ ಚಾತುರ್ಯಕ್ಕೆ ಕಾರಣ ಅವನು ಎಲ್ಲವನ್ನೂ ವಾಸ್ತವಿಕತೆಯ ಒರೆಗಲ್ಲಿಗೆ ಉಜ್ಜಿದುದು, ಅನುಮಿತಿಯಿಂದ ಯಥಾರ್ಥವನ್ನು ತಿಳಿದುದು ಎಂಬುದೇನೋ ಒಡೆದು ಕಾಣುತ್ತದೆ.

ಯೂರೋಪಿನಲ್ಲಿ ಪುನರುಜ್ಜೀವನ ನಡೆದಾಗ ಈ ಗೊಡ್ಡು ತತ್ವಸಂಪ್ರದಾಯಜ್ಞಾನಕ್ಕೆ ವಿರೋಧ ಅಂಕುರಿಸಿತು. ವಾಸ್ತವ ವಿಷಯಗಳಿಗೇ ಹೆಚ್ಚು ಹೆಚ್ಚು ಗಮನ ಕೊಡುತ್ತ ಬಂದರು. ಬರೀ ಅನುಮಾನ ಶಾಸ್ತ್ರವನ್ನೇ ನಂಬಿದ್ದುದು ಕಡಮೆಯಾಗಿ ಅನುಮಿತಿ, ಪ್ರಯೋಗ, ಸಂಶೋಧನೆಗಳಿಗೆ ಹೆಚ್ಚು ಗಮನ ಬರತೊಡಗಿತು. ಆಧುನಿಕ ವಿಚಾರದ ಮೊದಲಿಗರೆಲ್ಲರೂ ಬಾಹ್ಯ ಪ್ರಕೃತಿಯ ಬಗ್ಗೆ, ಅದರ ರೀತಿ-ಸೂತ್ರಗಳ ಅಭ್ಯಾಸದ ಬಗ್ಗೆ ಒತ್ತಿ ಹೇಳಿದಾರೆ. ವಾಸ್ತವಿಕ ಪ್ರಾಕೃತಿಕ ಪ್ರಯೋಗದಿಂದ ಜ್ಞಾನವನ್ನು ಪರಿಶೀಲಿಸಿ ಅದನ್ನು ಸಮನ್ವಯ ಮಾಡಿದುದರ ಫಲವೇ ಆಧುನಿಕ ವಿಜ್ಞಾನ ತತ್ವಶಾಸ್ತ್ರ. ಹೀಗೆಂದರೆ, ಪುರಾತನರು ಕೇವಲ ಅನುಮಾನವೊಂದನ್ನೇ ನಂಬಿದ್ದರೆಂದಲ್ಲ. ಪ್ರಾರಂಭದಲ್ಲಿ ಅವರ ವಿಕಾಸದ ಕಾಲದಲ್ಲಿ ಅವರೂ ಅನುಮಿತಿಯನ್ನು ಉಪಯೋಗಿಸಿದರು. ಯಾವುದನ್ನು ಹೆಚ್ಚಾಗಿ ಉಪಯೋಗಿಸಿದರೆಂಬುದೇ ಪ್ರಶ್ನೆ. ಆಗ ಅನುಮಾನ ಮುಖ್ಯವಾಗಿತ್ತು, ಈಗ ಅನುಗಮನ ಮುಖ್ಯ.

ಬೇಕನ್, ಮಾಂಟೇನ್, ಜಾನ್ ಲಾಕ್, ಎನ್‌ಸೈಕ್ಲೋಪೀಡಿಯಾಕರ್ತರು ಇವರಿಂದ ಮೊದಲುಗೊಂಡು ಇಂದಿನ ತತ್ವಶಾಸ್ತ್ರಿಗಳು, ಶಿಕ್ಷಣ ಪಂಡಿತರವರೆಗೂ ಪುಸ್ತಕಪಾಂಡಿತ್ಯವನ್ನೂ, ಪ್ರಕೃತಿಗೆ ವಾಸ್ತವಿಕತೆಗೆ ದೂರವಾದ ಅದರ ಸ್ವಭಾವವನ್ನೂ ವಿರೋಧಿಸುತ್ತಲೇ ಬಂದಿದಾರೆ. ಮೊಟ್ಟಮೊದಲು ಈ ವಿರೋಧ ಕಂಡುಬಂದುದು ತತ್ವಶಾಸ್ತ್ರ, ವಿಜ್ಞಾನಗಳಲ್ಲಿ. ಅವರು ಬಹುಕಾಲ ಶಿಕ್ಷಣವನ್ನು ಮುಟ್ಟಲಿಲ್ಲ. ವೈಜ್ಞಾನಿಕ ದೃಷ್ಟಿಗೆ ಎಷ್ಟು ದಿನ ಅದು ದೂರವಾಗಿದ್ದೀತು? ಆಧುನಿಕ ಶಿಕ್ಷಣ ಶಾಸ್ತ್ರದ ಪಿತಾಮಹನಾದ ರೂಸೋ 'ಎಮಿಲಿ' ಎಂಬ ಪುಸ್ತಕದಲ್ಲಿ ಶಿಕ್ಷಣದ ಹೊಸ ಪದ್ಧತಿಯ ಮೂಲ ವಿಚಾರವನ್ನು ಹೊರಗೆಡಹಿದ. ಅವನ ವಿಚಾರಗಳಿಗೆ ರೂಪುಕೊಡುವ ಸಂಸ್ಥೆಗಳು ಯೂರೋಪಿನಲ್ಲಿ ಹುಟ್ಟಿದವು. ಅವನೂ ಅವನ ಶಿಷ್ಯರೂ ಸೂಚಿಸಿದ ದಾರಿಯಲ್ಲಿ ಯೂರೋ

ಪಿನಲ್ಲೂ ಅಮೇರಿಕಾದಲ್ಲೂ ಪ್ರಯೋಗಗಳು ನಡೆದವು. ಈಗಲೂ ನಡೆದಿವೆ.

ಪ್ರಕೃತಿಯನ್ನು ಅನುಸರಿಸಿ ಮಗುವನ್ನು ಮಗುವಿನಂತೆಯೆ ನಡಸಬೇಕು, ವಯಸ್ಕನಂತೆ ಅಲ್ಲ ಎಂಬುದೇ ರೂಸೋನ ಮೂಲ ವಿಚಾರ. 'ಮಗುವಿನ ಮಾತು, ವಿಚಾರ, ಭಾವನೆಗಳ ರೀತಿಯೇ ಬೇರೆ; ಅದಕ್ಕೆ ಬದಲು ನಮ್ಮ ರೀತಿಗಳನ್ನು ನೆಡುವುದಕ್ಕಿಂತ ದೊಡ್ಡ ಅವಿವೇಕವಿಲ್ಲ.' ಮಕ್ಕಳ ರೀತಿ ಯಾವುದು? ರೂಸೋ ಹೇಳುತ್ತಾನೆ, 'ಮಕ್ಕಳು ಮೊದಲು ಪ್ರಕ್ಷುಬ್ಧರಾಗಿರುತ್ತಾರೆ, ಆಮೇಲೆ ಕೌತುಕ - ಕುತೂಹಲಪೂರ್ಣರಾಗುತ್ತಾರೆ.' ಅವರಿಗೆ ಈ ಅಶಾಂತಿ ಕ್ಷುಬ್ಧತೆಗಳನ್ನು ಕೊಟ್ಟ ಪ್ರಕೃತಿಯ ವಿವೇಕದಲ್ಲಿ ಏನೋ ಒಂದು ಉದ್ದೇಶ ವಿರಲೇಬೇಕು. ಅವರ ವಿಕಾಸವೇ ಆ ಉದ್ದೇಶವೆಂಬುದು ಸ್ಪಷ್ಟ. ಆದುದರಿಂದ ಮಗುವನ್ನು ಒಂದು ಇಕ್ಕಟ್ಟಾದ ಗಾಳಿ ಬೆಳಕಿಲ್ಲದ ಕೊಠಡಿಯಲ್ಲಿ ಕೂಡಿಸಿ ಬೆತ್ತದ ಬೆದರಿಕೆ ತೋರಿಸಿ ದಿನವೂ ಕೆಲವು ಗಂಟೆ ಹಳ್ಳಿಯ ಶಿಕ್ಷಕನ ಪುಸ್ತಕ ಪಾಂಡಿತ್ಯ ವನ್ನು ಅನುಸರಿಸುವಂತೆ ಮಾಡಿದರೆ ಮಗುವಿನಲ್ಲಿ ಅಡಗಿರುವ ಶಕ್ತಿಗಳನ್ನು ಹೊರಗೆಳೆಯಲಾದೀತೆ? ಅದಕ್ಕೆ ಇದು ದಾರಿಯೆ? ಯಥಾರ್ಥವೂ, ಫಲಕಾರಿಯೂ ಆದ ಜ್ಞಾನವನ್ನು ಅವನಿಗೆ ನೀಡುವ ದಾರಿ ಇದಲ್ಲ. ಮಗುವಿನ ಶಕ್ತಿ ಸಾಮರ್ಥ್ಯ ಗಳನ್ನು ಊನಮಾಡಿ ಅದರ ಬುದ್ಧಿಯ ಒಂದು ಅಂಶವನ್ನು ಮಾತ್ರ ಬೆಳೆಯಿಸಲು ಇದಕ್ಕಿಂತ ಉತ್ತಮ ಮಾರ್ಗವಿಲ್ಲ. ಏಕಕಾಲದಲ್ಲಿಯೆ ಉಳಿದೆಲ್ಲ ಶಕ್ತಿ-ಪ್ರವೃತ್ತಿಗಳನ್ನು ಉಪಯೋಗಿಸದಿದ್ದರೆ, ಬುದ್ಧಿಯೊಂದೇ ಆದರೆ ಅಷ್ಟೇ. ಅದರ ಬೆಳವಣಿಗೆ ಆರೋಗ್ಯಕರವೂ ಆಗದು, ಪೂರ್ಣವೂ ಆಗದು.

ರೂಸೋ ಮತ್ತೆ ಹೇಳುತ್ತಾನೆ: "ನಾನಾ ಶಾಸ್ತ್ರಗಳನ್ನು ಸೇರಿ ಮಗು ವನ್ನು ತಿಣಿಕಿಸಬೇಡಿ. ಅದರ ರುಚಿ ತೋರಿಸಿ, ಅದನ್ನು ಕಲಿವ ಬಗೆಯನ್ನು ಹೇಳಿ............ನೀವು ಹೇಳಿಕೊಟ್ಟಿರಿ ಎಂದೇ ಅವನಿಗೆ ಯಾವುದೂ ಬರಬೇ ಕಾಗಿಲ್ಲ, ಅವನೇ ಅದನ್ನು ಕಂಡುಕೊಳ್ಳಲಿ. ವಿಚಾರಕ್ಕೆ ಬದಲು ಅಧಿಕಾರವನ್ನು ಅವನ ತಲೆಯಲ್ಲಿ ಎಂದಾದರೂ ತುರುಕಿದಿರೋ ಮತ್ತೆ ಅವನು ವಿಚಾರ ಮಾಡುವುದೇ ಇಲ್ಲ. ಆಮೇಲೆ ಅವರಿವರ ಅಭಿಪ್ರಾಯದ ಪಾಠ ಒಪ್ಪಿಸುವ ಯಂತ್ರವಾಗುತ್ತಾನೆ."

ಹಳೆಯ ಪದ್ಧತಿ ಹೊಸ ಮತ್ತು ಪದ್ಧತಿಗಳ ಅನುಕೂಲ-ಅನನುಕೂಲತೆಗಳನ್ನು ಹೀಗೆ ತೂಗಿದಾರೆ: "ಮಗುವನ್ನು ಪುಸ್ತಕಕ್ಕೆ ಅಂಟಿಸಿ ಕೂಡಿಸದೆ ಕರ್ಮಾಲಯ ದಲ್ಲಿ ಕೆಲಸಮಾಡುವಂತೆ ಮಾಡಿದರೆ ಅವನ ಕೈ ಕೆಲಸಮಾಡಿ ಬುದ್ಧಿಗೆ ಲಾಭ ವಾಗುತ್ತದೆ. ತಾನು ಬರೀ ಕೆಲಸಗಾರ ಎಂದು ಅವನಿಗೆ ತೋರಿದರೂ ಅವನು ತತ್ವವೇತ್ತನಾಗುತ್ತಾನೆ .... ಕರ್ಮಾಲಯದಿಂದ ಕರ್ಮಾಲಯಕ್ಕೆ

ಅವನನ್ನು ನೀನು ಕರೆದೊಯ್ಯುವಾಗ ಅಲ್ಲಿ ಕೈಯಾರೆ ಕೆಲಸಮಾಡದೆ ಸುಮ್ಮನೆ ನೋಡಗೊಡಬೇಡ. ಮಾಡಿದುದಕ್ಕೆಲ್ಲಾ ಕಾರಣವನ್ನು ಪೂರ್ಣವಾಗಿ ಅರಿತು ಕೊಳ್ಳದೆ, ಕನಿಷ್ಠ ಪಕ್ಷ ತಾನು ಕಂಡುದಕ್ಕೆಲ್ಲಾ ಕಾರ್ಯಕಾರಣವನ್ನರಿಯದೆ, ಅವನು ಯಾವುದನ್ನೂ 'ಕಲಿಯದಿರಲಿ,' ಇತ್ತ ಬುದ್ಧಿ, ಅತ್ತ ಕಾರಣಗಳು ಎರಡನ್ನೂ ಒಟ್ಟಿಗೆ ಒಂದು ಕೈಗಾರಿಕೆಯ ಮೂಲಕ ಉಪಯೋಗಿಸುವಂತೆ ಅವನನ್ನು ತರಬೇತುಮಾಡಬೇಕು. ಅವನವನ ಶಕ್ತಿಗೆ ತಕ್ಕಂತೆ ಅವನವನ ಬೆಳವಣಿಗೆ. ಬುದ್ಧಿಯಾಗಲೀ ದೇಹವಾಗಲೀ ತನ್ನ ಶಕ್ತಿಮೀರಿ ಹೋರಲಾರದು. ಸ್ಮೃತಿಕೋಶದಲ್ಲಿ ವಿಷಯವನ್ನು ಸಂಗ್ರಹಿಸುವ ಮೊದಲೇ ಅದು ಅರ್ಥವಾಗಿ ಜೀರ್ಣವಾದರೆ ಅದರಿಂದ ಮಗು ಪಡೆದುದೆಲ್ಲವೂ ಅವನದೇ ಸ್ವಂತದ್ದಾಗುತ್ತದೆ. ಚೆನ್ನಾಗಿ ಅರಿತುಕೊಳ್ಳದೆ ಸ್ಮೃತಿಕೋಶದೊಳಗೆ ತುರುಕಿದರೆ ತನಗೆ ಉಪಯುಕ್ತವಾದುದೇನನ್ನೂ ಅವನು ಹೊರಸೆಳೆದುಕೊಳ್ಳಲು ಸಾಧ್ಯವಿಲ್ಲದೆ ಹೋಗುವ ಸಂಭವವುಂಟು." ಶಿಕ್ಷಣದಲ್ಲಿ ಸಹಜತೆ ಮತ್ತು ಸರಳತೆ ಬೇಕು ಎಂಬುದು ರೂಸೋನ ಅಭಿಪ್ರಾಯ. ಶಿಕ್ಷಣದಲ್ಲಿ ಮುಖ್ಯ ಸಾಧನ ಮಗುವೇ; ಶಾರೀರಿಕವಾಗಿಯಾಗಲಿ, ಬೌದ್ಧಿಕವಾಗಿಯಾಗಲಿ ಮಗುವನ್ನು ಬಲಾತ್ಕರಿಸಲಾಗದು ಎಂದು ಅವನ ಮತ. ಜೀವನದಿಂದ, ಜೀವನದ ಚಟುವಟಿಕೆಗಳಿಂದ ನೇರಾಗಿ ಅವನು ಕಲಿಯಬೇಕು. ಶಿಕ್ಷಣ ಅವನನ್ನು ಜೀವನಕ್ಕೆ ಅಣಿಮಾಡಬೇಕು.

ರೂಸೋ ತರುವಾಯ ಪೆಸ್ಟಲಾಜಿ, ಹರ್ಬರ್ಟ್, ಫ್ರೋಬೆಲ್ ಮುಂತಾದ ಅನೇಕ ಶಿಕ್ಷಣ ಸುಧಾರಕರು, ಶಿಕ್ಷಕರು ಜಾನ್ ಡ್ಯೂಯಿಯ ವರೆಗೆ, ರಷ್ಯಾದ ಬೊಲ್ಷೆವಿಕ್ ಸುಧಾರಕರವರೆಗೆ ಒಂದಲ್ಲ ಒಂದು ರೀತಿಯಲ್ಲಿ ಪುಸ್ತಕಜ್ಞಾನ, ಬೋಧನೆಗಳು ಚೆನ್ನಾಗಿ ಜೀರ್ಣವಾಗಬೇಕಾದರೆ ಮಗುವಿನ ಶಕ್ತಿಗಳು ವಿಕಾಸ ವಾಗಲು ಶಾಲೆಯಲ್ಲಿ ಅವನು ಕೈಯಾರೆ ಮಾಡಿದ ಪ್ರತ್ಯಕ್ಷ ಕಾರ್ಯದ ಮೂಲಕವೇ ಎಂದು ಪ್ರತಿಪಾದಿಸುತ್ತ ಬಂದಿದಾರೆ.

ಪೆಸ್ಟಲಾಜಿಯ ಪ್ರಕಾರ ಶಿಕ್ಷಣವು ವ್ಯಕ್ತಿಯ ಬೌದ್ಧಿಕ, ನೈತಿಕ, ದೈಹಿಕ ಸಚೇತನ ವಿಕಾಸ. ಕೆಲಸಮಾಡುವ ಆಸೆ, ಅದರಿಂದ ಬರುವ ಅನುಭವ ಈ ವಿಕಾಸಕ್ಕೆ ಬೀಜ. ಆದುದರಿಂದ ಶಬ್ದವಲ್ಲ, ಸ್ಮೃತಿಯಲ್ಲ ಶಿಕ್ಷಣದ ಆಧಾರ; ವಸ್ತು ದರ್ಶನ. ಶಿಕ್ಷಣ ಬರೀ ಸಿದ್ಧಾಂತ-ಶ್ರವಣವಾಗಬಾರದು, ವ್ಯಕ್ತಿತ್ವ ಸ್ವರೂಪಗಳನ್ನು ಬೆಳೆಸಲು ಯತ್ನಿಸಬೇಕು. ಪೆಸ್ಟಲಾಜಿ ಬರೆಯುತ್ತಾನೆ: "ಮಾನವಲೋಕದ ಸಮಸ್ತ ಶಕ್ತಿಗಳನ್ನೂ ಉಪಯೋಗಿಸಿ ತನ್ಮೂಲಕ ಬೆಳೆಸುತ್ತದೆ ಪ್ರಕೃತಿ; ಉಪಯೋಗದಿಂದ ಅದಕ್ಕೆ ವೃದ್ಧಿ........ ...ಮನುಷ್ಯನ ಗುಣಸ್ವಭಾವ ಗಳನ್ನು ಲಾಭಕರವಾಗಿ ಉಪಯೋಗಿಸಬೇಕೆಂದರೆ ಮಾನವಲೋಕದ ಶಿಕ್ಷಣಕ್ಕೆ

ಪ್ರಕೃತಿಯು ಮಾರ್ಗವನ್ನೇ ಅನುಸರಿಸಬೇಕು........ಸರಳತೆಯಿಂದಲೂ ನಿಷ್ಕಪಟತೆಯಿಂದಲೂ ಶಿಸ್ತಿನಿಂದ ತನ್ನ ಗುಣ ಶಕ್ತಿ ಗಳನು ಉಪಯೋಗಿಸುವ ಮನುಷ್ಯ ನಿಜವಾದ ಮಾನವ ಸ್ವಭಾವಕ್ಕೆ ನಿಕಟವರ್ತಿಯಾಗಿರಲು ಇದೇ ಕಾರಣ. ಹಾಗಲ್ಲದೆ ಪ್ರಕೃತಿಯ ವ್ಯವಸ್ಥೆಯನ್ನು ಭಂಗಗೊಳಿಸಿ ತನ್ನ ಜ್ಞಾನದ ಬೇರೆ ಬೇರೆ ಭಾಗಗಳಿಗೆ ಇರಬೇಕಾದ ಸಂಬಂಧವನ್ನು ಮುರಿಯುವವನು ತನ್ನಲ್ಲಿ ಜ್ಞಾನದ ನಿಜಾಧಾರವನ್ನೇ ನಾಶಮಾಡತ್ತಾನೆ; ಅದರ ಗುರಿಯನ್ನು ಮುಳುಗಿಸಿ ಸತ್ಯದ ಮಹಿಮೆಯನ್ನು ಅರಿಯುವ ಶಕ್ತಿಯನ್ನೇ ಕಳೆದುಕೊಳ್ಳುತ್ತಾನೆ.'

ಮಕ್ಕಳ ಎಳೆತನದ ವಯಸ್ಸನ್ನು ಕುರಿತು ಹೀಗೆ ಹೇಳುತ್ತಾನೆ: "ಈ ವಯಸ್ಸಿನಲ್ಲಿ ಮಕ್ಕಳ ಅನುಭವಶಕ್ತಿ, ಗ್ರಹಣಶಕ್ತಿ ಬಹಳ ಹೆಚ್ಚು. ಆದರೆ ನಮ್ಮ ಶಾಲೆಗಳು ಮನಶ್ಶಾಸ್ತ್ರಕ್ಕೆ ವಿರುದ್ಧ, ಅವೈಜ್ಞಾನಿಕ. ಮಕ್ಕಳಲ್ಲಿ ಪ್ರಕೃತಿ ಮೂಡಿಸುವ ಅನುಭವ, ಗ್ರಹಣ ಶಕ್ತಿಗಳನ್ನು ನಾಶಮಾಡುವ ಕೃತಕಯಂತ್ರಗಳಾಗಿರುವುದೇ ಈ ಶಾಲೆಗಳ ಬಲುಮೆ. ಐದು ವರ್ಷ ವಯಸ್ಸಿನವರೆಗೆ ನಮ್ಮ ಮಕ್ಕಳು ಪೂರ್ಣವಾಗಿ ಪ್ರಕೃತಿಯಲ್ಲಿಯೆ ರಮಿಸುತ್ತಾರೆ. ಪ್ರಕೃತಿಯ ಪ್ರಭಾವ ಪ್ರತಿಯೊಂದೂ ಅವರ ಮೇಲೆ ಬೀಳಲೆಂದೇ ನಾವು ಬಿಡುತ್ತೇವೆ. ಆಗ ಅವರಿಗೆ ತಮ್ಮ ಶಕ್ತಿಯ ಅರಿವಾಗುತ್ತದೆ. ನಿರ್ಬಂಧವಿಲ್ಲದ ಸ್ವಚ್ಛಂದದ ಆನಂದವನ್ನೂ, ಅದರ ಮನೋಹರತೆಯನ್ನೂ ಅವರು ಅಷ್ಟು ಹೊತ್ತಿಗೆ ಚೆನ್ನಾಗಿ ಅರಿತುಕೊಳ್ಳುತ್ತಾರೆ. ನಿಸರ್ಗಜೀವಿಗಳಾದ ಪ್ರಾಣಿಗಳ ಬೆಳವಣಿಗೆಯಲ್ಲಿ ಸ್ವಾಭಾವಿಕವಾಗಿ ಮೂಡಿಬರುವ ಸಹಜ ಸ್ವಚ್ಛಂದತೆ ಇಷ್ಟು ಹೊತ್ತಿಗಾಗಲೆ ಈ ಮಕ್ಕಳಲ್ಲಿ ಒಂದು ನಿಶ್ಚಿತಮಾರ್ಗವನ್ನು ಹಿಡಿಯುತ್ತದೆ. ಹೀಗೆ ಪ್ರತ್ಯಕ್ಷಾನುಭವದ ಸವಿಯನ್ನು ಐದು ವರ್ಷಕಾಲ ಪೂರ್ಣವಾಗಿ ಪಡೆದಮೇಲೆ ಸುತ್ತಣ ಪ್ರಕೃತಿಯೆಲ್ಲಾ ತಟ್ಟನೆ ಮಾಯವಾಗುವಂತೆ ಮಾಡುತ್ತೇವೆ; ಅಡ್ಡಿಆತಂಕಗಾಣದ ಅವರ ಸ್ವಾತಂತ್ರ್ಯದ ಮಧುರ ಪ್ರವಾಹಕ್ಕೆ ಬಲಾತ್ಕಾರವಾಗಿ ಕಾಠಿನ್ಯಪೂರ್ವಕವಾಗಿ ಅಡ್ಡ ಹಾಕುತ್ತೇವೆ; ಕುರಿಗಳಂತೆ ಅವರನ್ನು ದೊಡ್ಡಿಯಲ್ಲಿ ಕೂಡುತ್ತೇವೆ; ದುರ್ಗಂಧದ ಕೂಪಗಳಲ್ಲಿ ತಳ್ಳುತ್ತೇವೆ; ಗಂಟೆಗಟ್ಟಲೆ ದಿನಗಟ್ಟಲೆ, ವಾರ, ತಿಂಗಳು ವರ್ಷಗಳವರೆಗೆ ಸ್ವಲ್ಪವೂ ರುಚಿಯಿಲ್ಲದ ಆ ಅಸಹಜ ಆಕರ್ಷಣಹೀನ ಅಕ್ಷರಗಳ ಪೂಜೆಗೆ ಕಿಂಚಿತ್ತು ಕನಿಕರವಿಲ್ಲದೆ ನೂಕುತ್ತೇವೆ. ಅವರ ಮೊದಲಿನ ಜೀವನವೆಲ್ಲಿ, ಹುಚ್ಚು ಹಿಡಿಸುವ ಈ ಬದುಕೆಲ್ಲಿ?"

ಪೆಸ್ಟಲಾಜಿಯ ತರುವಾಯ ಫ್ರೊಬೆಲ್ ಶಿಕ್ಷಣದಲ್ಲಿ ಈ ವಸ್ತುನಿಷ್ಠ ಪದ್ಧತಿಯನ್ನು ಮುಂಬರಿಸಿದ. ಮಕ್ಕಳ ಮನೋಧರ್ಮ, ಅವರ ಕ್ರಿಯಾಸಕ್ತಿ

ಗಳ ಕಲ್ಪನೆಯನ್ನು ವಿಸ್ತರಿಸಿದ. ಶಿಕ್ಷಣಕ್ಕೆ ಇದು ಮೆಟ್ಟುಗಟ್ಟೆಯಾಗಬೇಕು ಎಂದ ಪ್ರತ್ಯಕ್ಷ ಇಂದ್ರಿಯಗೋಚರತೆ, ಸರಳ ರಚನಾಕಾರ್ಯ, ಪ್ರಕೃತಿಪಾಠ, ಕಿಂಡರ್‌ಗಾರ್ಟನ್‌ಗಳ ಮೂಲಕ ಶಿಕ್ಷಣವನ್ನು ಉತ್ತಮವಾಗಿ ನೀಡಬಹುದೆಂಬ ಕಲ್ಪನೆಯನ್ನು ಆತ ಬೆಳೆಸಿದ. ಈ ತತ್ವಗಳೆಲ್ಲವನ್ನೂ ಆಧುನಿಕ ಶಿಕ್ಷಣಪಂಡಿತರು ಒಪ್ಪಿದ್ದಾರೆ. ಹಿಂದೂಸ್ಥಾನದಲ್ಲಿ ಈ ತತ್ವವೇನೊ ಮಾನ್ಯ. ಆಚರಣೆ ಮಾತ್ರ ಶೂನ್ಯ.

ನಮಗಿಲ್ಲಿ ಸಂಬಂಧಿಸಿದುದು ರಚನಾಕಾರ್ಯ. ಫ್ರೋಬೆಲ್ ಹೇಳುತ್ತಾನೆ: "ನಿರಾಕಾರವಸ್ತುವಿಗೆ ಒಂದು ಆಕಾರ ಕೊಡಬೇಕು ಮನುಷ್ಯ. ಅವ್ಯಕ್ತವನ್ನು ವ್ಯಕ್ತಗೊಳಿಸಿ ಪ್ರಾಣಪ್ರತಿಷ್ಠೆಮಾಡಬೇಕು. ಮಾನವಜೀವ ಅದನ್ನು ಆವರಿಸಿ ಅದಕ್ಕೆ ಒಂದು ಬದುಕನ್ನು ಮೂಡಿಸಬೇಕು. ಉದ್ಯೋಗಗಳ, ಉತ್ಪಾದಕ ಕ್ರಿಯೆಯ ಶ್ರೇಷ್ಠ ಉದ್ದೇಶ ಇದು; ಅದರ ಉನ್ನತ ಅರ್ಥ, ಗಹನಲಕ್ಷಣ ಇದು. ಉದ್ಯೋಗ, ಕರ್ಮಕೌಶಲ್ಯಗಳಿಂದ ನಾವು ದೇವತೆಗಳಿಗೆ ಸಮವಾಗುತ್ತೇವೆ. ಯಾವುದನ್ನು ಮಾಡುವಾಗ ಹೊರಗಣ ವ್ಯಕ್ತದಲ್ಲಿ ಒಳಗಿನ ಅವ್ಯಕ್ತವನ್ನು ಮೂಡಿಸುತ್ತಿದ್ದೇವೆ ನಾವು ಎಂಬ ಸ್ಪಷ್ಟಜ್ಞಾನ ಅಥವಾ ಅಸ್ಪಷ್ಟ ಭಾವನೆ ನಮಗೆ ಇರುತ್ತದೋ, ಆತ್ಮಶಕ್ತಿಗೆ ರೂಪವನ್ನೂ ವಿಚಾರಕ್ಕೆ ಆಕಾರವನ್ನೂ ಕೊಡುತ್ತಿದ್ದೇವೆ ಅನಿಸುತ್ತದೋ, ಅದರಲ್ಲಿ ನಿಜವಾಗಿಅಗೋಚರವು ಗೋಚರಿಸುವಂತೆ ಮಾಡುತ್ತಿದ್ದೇವೆ."

ಮತ್ತೆ ಹೇಳಿದ್ದಾನೆ: "ಎಲ್ಲ ಕರ್ಮವನ್ನೂ ಸ್ವತಂತ್ರ ಕ್ರಿಯೆಯಾಗಿ ಗೌರವಿಸಬೇಕಾದ ಕಾಲ ಬಂದಿದೆ. ಎಲ್ಲಾ ಕ್ರಿಯೆಯೂ ಬುದ್ಧಿಪೂರ್ಣವಾಗಬೇಕು. ನಿರ್ಮಾಣ ಕಾರ್ಯದ ನಿಯಮ-ನ್ಯಾಯವನ್ನು ಅರಿತು, ಅದನ್ನು ಬುದ್ಧಿಪೂರ್ವಕ ಅನುಸರಿಸಿದರೇನೇ ಇದು ಸಾಧ್ಯ. ಇಲ್ಲಿಯ ವರೆಗೆ ತಿಳಿಯದೆಯೆ ಈ ನಿಯಮವನ್ನು ಅನುಸರಿಸಿದ್ದೇವೆ.ಬೇರೆ ಯಾವ ಬಗೆಯಲ್ಲೂ ಮನುಷ್ಯನ ಕ್ರಿಯೆ ಸ್ವತಂತ್ರ ಕಾರ್ಯವಾಗದು. ಕೇವಲ ಯಾಂತ್ರಿಕವಾದ ಜಡಕ್ರಿಯೆ ಬುದ್ಧಿಪೂರ್ಣಕಾರ್ಯವಾಗಬೇಕೆಂದರೆ ಯಾವುದು ಕೈಗೆಲಸವೋ ಅದೇ ಬುದ್ಧಿಯ ಕೆಲಸವೂ ಆಗಬೇಕು; ಏಕ ಕಾಲದಲ್ಲಿ ಎರಡೂ ಆಗಬೇಕು. ಈಗಂತೂ ಕಲೆಯೊಂದನ್ನು ಮಾತ್ರ ಸ್ವತಂತ್ರಕ್ರಿಯೆ ಎನ್ನಬಹುದು. ಆದರೆ ಮನುಷ್ಯ ಮಾಡುವ ಎಲ್ಲಾ ಕೆಲಸವೂ ನಿರ್ಮಾಣಕ್ರಿಯೆಯೇ. ಮನುಷ್ಯನು ಸೃಷ್ಟಿಕರ್ತನ ಅಂಶ ಮತ್ತು ಪ್ರತೀಕ ಅಲ್ಲವೆ? ಆದುದರಿಂದ ಮನುಷ್ಯನೂ ತನ್ನ ಲೋಕದಲ್ಲಿ ತಾನು ಸೃಷ್ಟಿಕರ್ತ,

೩೪ ನೇ ಪುಟ ನೋಡಿ

ಮಗನಲಾಲ್ ಗಾಂಧೀ

– ವಿನೋಬಾ

(ಮಗನಲಾಲ್ ಗಾಂಧೀ ಗಾಂಧೀಜಿಯವರ ಆಪ್ತಕಾರ್ಯಕರ್ತರಲ್ಲಿ ಒಬ್ಬರಾಗಿದ್ದರು. ಖಾದಿ–ಗ್ರಾಮೋದ್ಯೋಗಗಳಿಗಾಗಿ ತಮ್ಮ ಜೀವನ ಮುಡಿಪಾಗಿಟ್ಟಿದ್ದರು. ಅವರನ್ನು ಕುರಿತು ಒಂದು ಆತ್ಮೀಯ ಪರಿಚಯ ಅವರ ನಿಕಟವರ್ತಿ ವಿನೋಬಾರಿಂದ ಇಲ್ಲಿದೆ.–ಸಂ)

ಮಗನಲಾಲ್ ಗಾಂಧೀ ನನ್ನ ಮೇಲೆ ಬಹು ಪ್ರೇಮವಿರಿಸಿದ್ದರು. ಜೀವನದ ಎಲ್ಲ ಅಂಗಗಳ ಕಡೆಗೆ ಅವರು ಅಧ್ಯಾತ್ಮಿಕ ದೃಷ್ಟಿಯಿಂದ ನೋಡುತ್ತಿದ್ದರು ಹಾಗೂ ತಮ್ಮ ಎಲ್ಲ ಕಾರ್ಯಗಳಲ್ಲಿ ಅದಕ್ಕನುಗುಣವಾಗಿ ನಡೆಯಲು ಪ್ರಯತ್ನಿಸುತ್ತಿದ್ದರು. ಒಂದು ಬಾರಿ ಅವರು ನನಗೆ ಒಂದು ಗುಜರಾತಿ ಗಾದೆಯನ್ನು ಹೇಳಿದ್ದರು. ಅದು ನನ್ನ ಮನಸ್ಸಿನಲ್ಲಿ ಬಲವಾಗಿ ಬೇರೂರಿದೆ. ಆ ಗಾದೆಯ ಪ್ರಕಾರ ಮನುಷ್ಯನ ಪರೀಕ್ಷೆ ಎರಡು ಸ್ಥಳಗಳಲ್ಲಿ ಆಗುತ್ತದೆ. ಒಂದು, ಆರೋಗ್ಯ ತಪ್ಪಿ ಮಂಚದ ಮೇಲೆ ಮಲಗಿದಾಗ; ಇನ್ನೊಂದು, ಊಟಕ್ಕಾಗಿ ಮಣೆ ಮೇಲೆ ಕುಳಿತಾಗ ಅವನ ಜ್ಞಾನದ ಪರೀಕ್ಷೆ ಆಗುತ್ತದೆ.

ಶ್ರದ್ಧಾಂಜಲಿ

ಮಗನಲಾಲರನ್ನು ತನ್ನ ಕಡೆಗೆ ಕರೆದುಕೊಂಡು ಹೋಗುವಲ್ಲಿ ದೇವರ ಇಚ್ಛೆ ಏನಿತ್ತೊ ನನಗೆ ಗೊತ್ತಿಲ್ಲ. ಆದರೆ ಅದರಲ್ಲಿ ಒಳ್ಳೆಯ ಉದ್ದೇಶ ವಿತ್ತೆಂದೇ ತಿಳಿಯಬೇಕು. ಬಂಗಾಳಕ್ಕೆ ಹೋಗುವ ಮಾರ್ಗದಲ್ಲಿ ಅವರು ವರ್ಧಾದಲ್ಲಿ ಇಳಿದಿದ್ದರು. ಇದೇ ನನ್ನ ಮತ್ತು ಅವರ ಕೊನೆ ಭೇಟಿ. ದೇಹ–ದೃಷ್ಟಿಯಿಂದ ಯೋಚಿಸಿದರೆ ಅದು ಕೊನೆ ಭೇಟಿಯಾಗಿತ್ತು. ಆದರೆ ಅವರ ಆತ್ಮದೊಂದಿಗೆ ನಿರಂತರ ಮಿಲನ ಆಗುತ್ತಲೇ ಇರುತ್ತದೆ. ಈ ಬಗ್ಗೆ ನನಗೆ ಯಾವ ಸಂದೇಹವೂ ಇಲ್ಲ.

ಮಗನಲಾಲಭಾಯಿ ತಮಗಾಗಿ ಬೇರೆಯವರ ಸೇವೆಯನ್ನು ಬಹಳ ಅಪರೂಪವಾಗಿ ಪಡೆದಿರಬಹುದು. ತಮ್ಮ ಶರೀರದ ಬಗ್ಗೆ ಅವರು ಎಂದೂ ಆಲೋಚಿಸಿರಲಿಲ್ಲ. ಮಗನಲಾಲಭಾಯಿಯವರ ಜೀವನದ ಅಕ್ಷಯ ಪ್ರಭಾವ ನನ್ನ ಹೃದಯದ ಮೇಲೆ ಇದೆ. ನನ್ನಲ್ಲಿ ಅವರ ಬಗ್ಗೆ ಒಂದು ಪ್ರಕಾರದ ಪಾವಕ ಭಯವಿತ್ತು. ನನ್ನ ಮೇಲೆ ಅವರದು ಅನಂತ ಉಪಕಾರವಿದೆ. ನಾನು ಆ ಬಗ್ಗೆ ಎಂದೂ ಕೃತಘ್ನನಾಗಿರಲಾರೆ.

ಮಗನಲಾಲರ ಸ್ವಭಾವ ತೆಂಗಿನಕಾಯಿಯಂತೆ. ತೋರಿಕೆಗೆ ಅವರು ಕಠೋರವಾಗಿ ಕಾಣುತ್ತಿದ್ದರು, ಆದರೆ ಹೃದಯ ಅತ್ಯಂತ ಕೋಮಲವಾಗಿತ್ತು. ತಮ್ಮ ಮೇಲೆ ಬಾಹ್ಯ ವಾತಾವರಣದ ಪ್ರತಿಕೂಲ ಪ್ರಭಾವ

ಬೀಳದೇ ಇರುವುದಕ್ಕಾಗಿ ಸಾಧಕರಿಗೆ ವೈರಾಗ್ಯದ ಕಠೋರ ಕವಚ ಬಹಳಷ್ಟು ಅಗತ್ಯವಿದೆ. ಅದರೊಂದಿಗೇನೆ ಅಂತರ್ಯದಲ್ಲಿ ತುಂಬಿತುಳುಕುವ ಪ್ರೇಮ ಇರಬೇಕು. ಇದರಿಂದ ಸಾಧನೆಯಲ್ಲಿ ನೈಜ ಆನಂದ ಪ್ರಾಪ್ತವಾಗುವುದು. ಹಿಂದುಗಳಲ್ಲಿ ಮಂಗಳಕಾರ್ಯಗಳ ಸಂದರ್ಭದಲ್ಲಿ ತೆಂಗಿನಕಾಯಿ ಪೂಜೆಮಾಡುವ ಪದ್ಧತಿಯಿದೆ. ಇದರ ರಹಸ್ಯವೇನೆಂದರೆ ಕಠೋರ ವ್ರತಗಳ ಕವಚದಿಂದ ಪ್ರೇಮವು ರಕ್ಷಿತವಾಗಿದ್ದರೆ ಆಗ ಕಾರ್ಯ ಸಂಪೂರ್ಣಗೊಳ್ಳುವುದು, ಮಗನ ಲಾಲರ ಜೀವನ ಮಂಗಳಮಯವಾಗಿ ಕಳೆದುದಕ್ಕೆ ಕಾರಣ ಅವರ ತೆಂಗಿನಕಾಯಿ ಯಂಥ ಸುಂದರ ಸ್ವಭಾವ.

ಆದರೆ ಸಾಧಕರ ಈ ಪ್ರಕಾರದ ಮೃದು ಹಾಗು ಕಠೋರ ಸ್ವಭಾವದ ಕಾರಣ ಅನೇಕ ಜನರು ಅವರ ಬಗ್ಗೆ ತಪ್ಪು ತಿಳುವಳಿಕೆ ಹೊಂದುತ್ತಾರೆ. ಈ ಕಾರಣ ದಿಂದಲೇ ಸಾಧಕರು ಬಹಳಷ್ಟು ಸಹಿಸಿಕೊಳ್ಳಬೇಕಾಗುತ್ತದೆ. ಆದರೆ ಇದರಿಂದಾಗಿ ಸಾಧಕರಿಗೆ ಯಾವ ನಷ್ಟವೂ ಇಲ್ಲ. ಈ ಪ್ರಕಾರದ ತಪ್ಪು ತಿಳುವಳಿಕೆಯು ಸಾಧನೆಯೆಂಬ ಗಿಡಕ್ಕೆ ಗೊಬ್ಬರದಂತೆ ಪೋಷಣೆ ಕೊಡುತ್ತದೆ. ಮಗನಲಾಲರ ಬಗ್ಗೆಯೂ ಹೀಗೆಯೇ. ಅನೇಕ ಜನ ಅವರ ಬಗ್ಗೆ ತಪ್ಪು ಭಾವಿಸಿದ್ದರು. ಪರಿಣಾಮ ಸ್ವರೂಪವಾಗಿ ಅವರ ಆತ್ಮಪರೀಕ್ಷೆ ಇನ್ನೂ ತೀವ್ರವಾಗುತ್ತ ಹೋಯಿತು.

ಅವರ ಬಗ್ಗೆ ನನ್ನ ಮನದಲ್ಲಿ ಎಂದೂ ತಪ್ಪು ತಿಳುವಳಿಕೆ ಆಗದಿದ್ದುದು ನನ್ನ ಸದ್ಭಾಗ್ಯವೆಂದೇ ಭಾವಿಸುತ್ತೇನೆ. ಎಂದಾದರೂ ಅವರೊಂದಿಗೆ ತಪ್ಪು ತಿಳುವಳಿಕೆ ಆಗಿದ್ದರೂ ಸಹ ಆಗ ಅವರು ಹೇಳಿದಂತೆ ಮಾಡುವುದೇ ಉಚಿತ ವೆಂದು ತಿಳಿದೆ. ಅವರ ಕಠೋರ ವೃತ್ತಿಯ ಅನುಭವ ನನಗೆಂದೂ ಆಗಲಿಲ್ಲ, ನನಗಂತೂ ಅವರ ಪ್ರೇಮವೇ ದೊರೆಯಿತು.

ಬ್ರಹ್ಮಚರ್ಯೆಯ ಬಗ್ಗೆ ಅವರಿಗೆ ಬಹಳೇ ಅನುರಾಗವಿದ್ದಿತು. ಈ ವಿಷ ಯದ ಬಗ್ಗೆ ಅವರೊಂದಿಗೆ ನಾನು ಬಹಳಷ್ಟು ಚರ್ಚಿಸುತ್ತಿದ್ದೆ. ಆತ್ಮದರ್ಶನದ ಮಾರ್ಗದಲ್ಲಿ ಇರುವ ವಿಘ್ನರೂಪಿ ವಸ್ತುಗಳ ಬಗ್ಗೆ ಮಾತು ನಡೆದಾಗ ಅವರು ಗೃಹಸ್ಥಾಶ್ರಮದೊಂದಿಗೆ ಆದ ತಮ್ಮ ಸ್ಪರ್ಶಕ್ಕಾಗಿ ಅವರು ಬಹಳ ನೊಂದಿ ದ್ದರು. ಅದನ್ನು ಅವರು 'ದುರಾಚರಣೆ' ಯೆಂಬುದಾಗಿ ಹೇಳುತ್ತಿದ್ದರು. ವಸ್ತುತಃ ಅವರ ಗೃಹಜೀವನ ಬಹಳ ಅಲ್ಪ ಕಾಲದ್ದೂ ಮತ್ತು ಸಂಯಮ ಪೂರ್ಣವೂ ಆಗಿದ್ದಿತು ಇಂಥ ಗೃಹಜೀವನವನ್ನು ಶಾಸ್ತ್ರಜ್ಞರು ನಿಂದ್ಯವೆಂದು ಭಾವಿಸಿಲ್ಲ. ಆದರೆ ಪರಮಾರ್ಥ ಮಾರ್ಗದಲ್ಲಿ ನಡೆಯುವ ಮನುಷ್ಯನಿಗೆ ಪುಣ್ಯವೂ ಪಾಪರೂಪವಾಗಿಯೇ ಕಾಣುತ್ತದೆ. ಸರಪಣಿ ಕಬ್ಬಿಣ ದ್ದಾಗಿದ್ದರೇನು, ಚಿನ್ನದ್ದಾಗಿದ್ದರೇನು ಅದರಲ್ಲಿ ಯಾವ ವ್ಯತ್ಯಾಸ ಉಂಟಾಗುತ್ತದೆ? ಆದ್ದರಿಂದ ತಮ್ಮ ಗೃಹಸ್ಥಾಶ್ರಮದ ಬಗ್ಗೆ ಅವರಿಗೆ

ದುಃಖವೇ ಇತ್ತು. ಏನಾಗಬೇಕಿತ್ತೋ ಅದಾಗಿ ಹೋಗಿತ್ತು. ಅದಕ್ಕಾಗಿ ಬೇರೆ ಉಪಾಯವಿರಲಿಲ್ಲ. ಆದರೆ ಅತಿ ಉತ್ಕಟ ಭಾವನೆಯಿಂದ ಪೂರ್ವಕರ್ಮ ಸುಟ್ಟು ಬೂದಿಯಾಗುವುದು ನಿಜವೆಂದು ಭಾವಿಸಿದಲ್ಲಿ ಮಂಗನಲಾಲರ ಗೃಹ ಸ್ಥಾಶ್ರಮವು ಸುಟ್ಟುಹೋಗಿದೆ.

ಸಂತ ತುಳಸೀದಾಸರು ಸಾಧುಗಳ ಸನ್ನಡತೆಗೆ ಪವಿತ್ರ ಹತ್ತಿಯ ಉಪಮೆಯನ್ನು ಕೊಟ್ಟಿದ್ದಾರೆ. ಮಂಗನಲಾಲರು ತುಳಸೀದಾಸರ ಈ ವಚನವನ್ನು ತಮ್ಮ "ನೇಯ್ಗೆ ಶಾಸ್ತ್ರ" ಎಂಬ ಪುಸ್ತಕದಲ್ಲಿ ಅಳವಡಿಸಿಕೊಂಡಿದ್ದಾರೆ. ಇದರ ತಾತ್ಪರ್ಯ ಏನೆಂದರೆ ಅವರು ಹತ್ತಿಗೆ ಸಾಧುಗಳ ಸನ್ನಡತೆಯ ಹೋಲಿಕೆ ಕೊಟ್ಟಿದ್ದಾರೆ. ಇದರಿಂದ ಅವರು ಖಾದಿಕಾರ್ಯವನ್ನು ಎಷ್ಟು ಪಾರಮಾರ್ಥಿಕ ಭಾವನೆಯಿಂದ ನೋಡುತ್ತಿದ್ದರೆಂಬುದು ಗೊತ್ತಾಗುತ್ತದೆ. ಅವರ ಮಟ್ಟಿಗೆ ಖಾದಿಕಾರ್ಯ ಒಂದು ಭಗ್ವದಪೂಜೆಯೇ ಆಗಿತ್ತು. ಕರ್ಮವು ಭಾವನಾಮಯ ವಾದಾಗ ಆ ಕರ್ಮವೂ ಪೂಜೆಯೇ ಆಗುತ್ತದೆ. ಇದಕ್ಕೆ ವಿರುದ್ಧವಾಗಿ ಭಾವನೆ ಯಿರದಿದ್ದ ಪಕ್ಷದಲ್ಲಿ ಪೂಜೆಯೂ ಶುಷ್ಕ ಕ್ರಿಯೆಯಾಗುತ್ತದೆ. ಸ್ವಕರ್ಮರೂಪಿ ಪುಷ್ಪಗಳಿಂದ ಪರಮಾತ್ಮನ ಪೂಜೆಮಾಡಬೇಕೆಂಬ ಗೀತೆಯ ಉಪದೇಶವನ್ನು ಮಂಗನಲಾಲರು ತಮ್ಮ ಆಚರಣೆಯಲ್ಲಿ ತಂದಿದ್ದರು.

ಸ್ವಾಧ್ಯಾಯಕ್ಕಾಗಿ ಅವರಿಗೆ ಹೆಚ್ಚು ಸಮಯ ದೊರೆಯುತ್ತಿರಲಿಲ್ಲ. ಆದರೂ ಕೂಡ ನಿರಂತರವಾಗಿ ನಡೆಯುವ ಉದ್ಯೋಗಗಳ ಮಧ್ಯದಲ್ಲಿಯೇ ಸ್ವಲ್ಪ ಸಮಯವನ್ನು ಅದಕ್ಕಾಗಿ ತೆಗೆದಿಡುತ್ತಿದ್ದರು. ಅವರು ಗೀತೆಯ ಭಕ್ತ ರಾಗಿದ್ದರು. ಉಪನಿಷತ್ತುಗಳ ಅನೇಕ ಮಂತ್ರಗಳನ್ನು ಅವರು ಕಂಠಸ್ಥ ಮಾಡಿ ಕೊಂಡಿದ್ದರು. ಅನೇಕ ಸಲ ಅವುಗಳ ಮನನವನ್ನೂ ಮಾಡುತ್ತಿದ್ದರು. ರಾಮಚರಿತಮಾನಸವನ್ನು ಅವರು ಅನೇಕ ಬಾರಿ ಓದಿದ್ದರು. ರಾಮಾಯಣ ದಲ್ಲಿ ಭರತ ಮತ್ತು ಹನುಮಂತನ ಪಾತ್ರಗಳು ಅವರಿಗೆ ಅತಿಪ್ರಿಯವಾಗಿದ್ದವು. ರಾಮಾಯಣದಲ್ಲಿ ಹನುಮಂತನಿಗೆ ಇರುವ ಸ್ಥಾನವೇ ಬಾಪೂರ ಜೀವನದಲ್ಲಿ ಮಂಗನಲಾಲರಿಗಿದೆ.

ಹಿಂದೂಸ್ತಾನವು ಸಂತರ ಭೂಮಿ. ಈ ಭೂಮಿಯ ಮೇಲೆ ಅನಾದಿ ಕಾಲದಿಂದಲೂ ಸಂತರ ಪರಂಪರೆ ನಡೆದುಕೊಂಡು ಬಂದಿದೆ. ಇಂದಿನ ನಮ್ಮ ಪತಿತಕಾಲದಲ್ಲಿಯೂ ಕೂಡ ತಾಯಿ ತನ್ನ ಗುಣವನ್ನು ಬಿಟ್ಟು ಕೊಟ್ಟಿಲ್ಲ. ಇಂದೂ ಕೂಡ ಜಗತ್ತಿನ ಕಲ್ಯಾಣಕ್ಕಾಗಿ ಸಂತರ ಅವತಾರಗಳಾಗುತ್ತಿವೆ. ಇಂಥ ಸಂತ ಅವತಾರಿ ಪುರುಷರಲ್ಲಿ ಮಗಲಾಲಭಾಯಿ ಅವರ ಗಣನೆಯನ್ನು ಮಾಡಲು ನನಗೆ ಎಳ್ಳಷ್ಟೂ ಸಂಕೋಚವಿಲ್ಲ.

"ಮೈತ್ರಿ" ಸಾಭಾರ : ಅನು : ಸುಕೌ

ವಿಜ್ಞಾನದ ಅಸಂಗತ ಉಪಯೋಗ

– ಎಂ. ಆರ್. ಶ್ರೀನಿವಾಸನ್

ಇಷ್ಟರಲ್ಲಿಯೇ ಐವತ್ತನೇ ಪುಗ್‌ವಾಶ್ ಸಮ್ಮೇಳನ ಸೇರಲಿದೆ. ಆ ಸಮ್ಮೇಳನದಲ್ಲಿ ಚರ್ಚಿಸುವುದಕ್ಕಾಗಿ ಅಂತರ್‌ರಾಷ್ಟ್ರೀಯ ಮಟ್ಟದ ವಿಜ್ಞಾನಿಗಳ ಸಮಿತಿ ಒಂದು ಲೇಖನವನ್ನು ತಯಾರಿಸಿದೆ. ಆ ಲೇಖನದ ಹೆಸರು "ವಿಜ್ಞಾನದ **ಅಸಂಗತ ಉಪಯೋಗ.**" ಈ ಲೇಖನವನ್ನು ತಯಾರಿಸಿದ ಸಮಿತಿಯಲ್ಲಿ ರಾಯಲ್ ಸೊಸೈಟಿಯ ಹಿಂದಿನ ಅಧ್ಯಕ್ಷ ಸರ್ ಮೈಕೆಲ್ ಆಟಿಯಾ ಮತ್ತು ನೋಬೆಲ್ ಶಾಂತಿ ಪ್ರಶಸ್ತಿ ವಿಜೇತ್ ಸರ್ ಜೊಸೆಫ್ ರೋಟ್‌ಬ್ಲಾಟ್ ಸಹ ಇದ್ದಾರೆ. ವಿಜ್ಞಾನದ ಅನೇಕ ಅಸಂಗತ ಉಪಯೋಗಗಳ ಸಾಧ್ಯತೆಯನ್ನು ಕುರಿತು ಆಳವಾದ ಅಧ್ಯಯನ ಮಾಡಿ ಒಂದು ಸಮಗ್ರ ಪ್ರಬಂಧವನ್ನು ತಯಾರಿಸಿರುವುದಕ್ಕಾಗಿ ಅದರ ಲೇಖಕರು ಅಭಿನಂದನೀಯರು, ಉದಕಮಂಡಲದ ಗಿರಿಧಾಮದಲ್ಲಿ ಕುಳಿತಿರುವ ನಾನು ಈ ಬಗ್ಗೆ ಯೋಚಿಸಲು ಪ್ರಾರಂಭಿಸಿದರೆ ನನ್ನ ಮನಸ್ಸು ೧೭೦ ವರ್ಷಗಳ ಹಿಂದಕ್ಕೆ ಕ್ರಿ.ಶ. ೧೮೩೦ ಕ್ಕೆ ಹೋಗುತ್ತದೆ. ಅಲ್ಲಿಯವರೆಗೆ ಉದಕಮಂಡಲದ ಈ ಪ್ರಸ್ಥಭೂಮಿ ಕೇವಲ ಹುಲ್ಲುಗಾವಲಿನಿಂದಲೂ ಮತ್ತು ಪ್ರಾಕೃತಿಕ ಕಾಡಿನಿಂದಲೂ ಕೂಡಿದುದಾಗಿತ್ತು. ಅಲ್ಲದೆ, ನಾಲ್ಕು ಆದಿವಾಸಿ ಸಮೂಹಗಳೂ ವಾಸವಾಗಿದ್ದವು. ಈ ಸಮೂಹಗಳು ಅನ್ಯೋನ್ಯತೆಯಿಂದ ಸಹಜೀವನ ನಡೆಸುತ್ತಿದ್ದವು. ೧೮೩೦ ರ ಸುಮಾರಿಗೆ ಕೊಯಮುತ್ತೂರಿನಂಥ ಬಯಲು ಪ್ರದೇಶದಲ್ಲಿದ್ದ ಸುಲಿವಾನ್ ಎಂಬ ಬ್ರಿಟಿಷ್ ಕಲೆಕ್ಟರ್ ಈ ಪ್ರದೇಶಕ್ಕೆ ಭೇಟಿ ಕೊಟ್ಟಾಗ ಈ ಪ್ರದೇಶವು ಸೈನಿಕರಿಗೂ, ನಾಗರಿಕರಿಗೂ ಆರೋಗ್ಯ ಸಂಧಾರಣೆಗಾಗಿ ಬಹು ಸೂಕ್ತವೆಂದು ತಿಳಿದುಕೊಂಡನು. ನಂತರ ಎಲ್ಲ ವಸಾಹತುಗಳಲ್ಲಿ ಆದಂತೆಯೇ ಇಲ್ಲಿಯೂ ಭೂವರ್ಗಾವಣೆ ಆಗಿ ಮೂಲನಿವಾಸಿಗಳ ಬಹಳಷ್ಟು ಭೂಮಿ ಇಂಗ್ಲೀಷರ ಅಧೀನಕ್ಕೆ ಬಂದಿತು. ಮುಂದೆ ೫೦ ವರ್ಷಗಳ ಅನಂತರ ಕ್ರಿ.ಶ. ೧೮೮೦ ರ ಹೊತ್ತಿಗೆ ಶೋಲಾ ಕಾಡಿನ ಬಹುಭಾಗ ಪ್ರದೇಶವು ಚಹಾ ತೋಟಗಳಾಗಿ ಪರಿವರ್ತಿತಗೊಂಡಿತು. ಈ ತೋಟಗಳು ಬ್ರಿಟಿಶ್ ಅಥವಾ ಅವರ ಕಂಪನಿಗಳ ವಶವಾದವು ಮತ್ತು ಸ್ಥಾನೀಯ ಭಾರತೀಯರು ತೋಟಗಳ ಕಾರ್ಮಿಕರಾಗಿ ಹೊಟ್ಟೆ ಹೊರೆದುಕೊಳ್ಳಹತ್ತಿದರು. ಸ್ವಾತಂತ್ರ್ಯದ ನಂತರ ಇವು ಭಾರತೀಯ ಬಂಡವಾಳಸ್ಥರ ಹೆಸರಿಗೆ ಅಥವಾ ಭಾರತೀಯ ಕಂಪೆನಿಗಳಿಗೆ ವರ್ಗಾವಣೆ ಆದವು. ಅಲ್ಲದೆ, ಈಗ ಉದಕಮಂಡಲ ಮತ್ತು ಸುತ್ತಲಿನ ಪ್ರದೇಶ ದೊಡ್ಡ

ಪ್ರವಾಸಿ ಕೇಂದ್ರಗಳಾಗಿವೆ. ಪ್ರತಿದಿನ ಒಂದು ಲಕ್ಷಕ್ಕೂ ಹೆಚ್ಚು ಪ್ರವಾಸಿಗರು ಭೇಟಿ ಕೊಡುತ್ತಾರೆ. ಸ್ಥಳೀಯ ಜನಸಂಖ್ಯೆಯೂ ಒಂದು ಲಕ್ಷ ಇದೆ. ಆದ್ದರಿಂದ ಇಲ್ಲಿಯ ಜನರು ಗಾಳಿ, ನೀರು, ಧ್ವನಿ ಮತ್ತು ಗಟ್ಟಿಯಾದ ತ್ಯಾಜ್ಯ ವಸ್ತುಗಳ ಮಾಲಿನ್ಯತೆಯಿಂದ ಬಳಲುತ್ತಿದ್ದಾರೆ. ಈ ವಿಷಾದನೀಯ ಪರಿಸ್ಥಿತಿಯ ನಿರ್ಮಾಣಕ್ಕೆ ಅಸಂಗತ ವಿಜ್ಞಾನಾಧಾರಿತ ಅಭಿವೃದ್ಧಿ ಕಾರಣವೆಂದು ಹೇಳಿದರೆ ತಪ್ಪೆ?

ಮೇಲೆ ಹೇಳಲಾದ ಪ್ರಬಂಧದ ಲೇಖಕರ ಸ್ಮರಣೆಯಲ್ಲಿ ಹಿಟ್ಲರ್ ಮತ್ತು ಸ್ಟಾಲಿನರ್ ದುಷ್ಕೃತ್ಯಗಳ ಪ್ರಭಾವವಿದೆ, ನಾವು ಇದಕ್ಕೆ ಹಿಂದೆ ಹೋಗಿ ಇತರೆ ಬೇರೆ ಆಕ್ರಮಣಕಾರರಾದ ಸೀಜರ್, ಅಲೆಕ್ಸಾಂಡರ್, ಚೆಂಗೀಸ್‌ಖಾನ್, ತೈಮೂರ್ ಮುಂತಾದವರು ಹಾಗೂ ಮಧ್ಯ ಏಶಿಯಾದ ಲೂಟಿಗಾರರು ಆಗಾಗ್ಗೆ ಭಾರತವನ್ನು ಲೂಟಿಮಾಡಿದ್ದನ್ನೂ ಜ್ಞಾಪಿಸಿಕೊಳ್ಳಬೇಕು. ಇದರ ಜೊತೆಗೆ ಯುರೋಪ್ ದೇಶದ ವಸಾಹತಗಾರರು ಉತ್ತರ ಮತ್ತು ದಕ್ಷಿಣ ಅಮೇರಿಕಾದಲ್ಲಿ ಮಾಡಿದ ಮಾನವ ಹತ್ಯೆಯನ್ನು ಹಾಗೂ ಆಫ್ರಿಕಾ, ಭಾರತ ಮತ್ತು ಇಂಡೋನೇಷಿಯಾದಲ್ಲಿ ಮಾಡಿದ ಲೂಟಿಯನ್ನು ಜ್ಞಾಪಿಸಿಕೊಳ್ಳಬೇಕು. ಈ ಪಟ್ಟಿ ಪೂರ್ಣವೇನಲ್ಲ, ಈ ಎಲ್ಲ ಸಂದರ್ಭಗಳಲ್ಲಿ ಮಿಲಿಟರಿ ಜ್ಞಾನದ ದುರುಪಯೋಗ ಆಗಿರುವುದು ಮತ್ತು ಸ್ಥಿರವಾಗಿ ನೆಲಸಿದ್ದ ಸಮಾಜಗಳ ದುರಾಕ್ರಮಣವು ಅನಾಗರಿಕ ಅಥವಾ ಸೈನ್ಯ ಶಕ್ತಿಯಲ್ಲಿ ಬಲಿಷ್ಠವಾದಂಥವರಿಂದ ಆಗಿರುವುದು ಕಂಡುಬರುತ್ತದೆ, ಆಧುನಿಕ ವಿಜ್ಞಾನದ ಲಾಭ ಹೆಚ್ಚಾಗಿ ಯುರೋಪ್, ಉತ್ತರ ಅಮೇರಿಕಾ ಮತ್ತು ಬಿಳಿಯರು ನೆಲಸಿರುವ ದೇಶಗಳಿಗೆ ಆಗಿದೆ. ಪ್ರಪಂಚದ ಮುಕ್ಕಾಲುಭಾಗದ ಜನರು ವಿಜ್ಞಾನದಿಂದ ಅತ್ಯಂತ ಕಡಿಮೆ ಲಾಭ ಪಡೆದಿದ್ದಾರೆ. ಪ್ರಪಂಚದ ವ್ಯವಸಾಯದ ಉತ್ಪಾದನೆ ಅನೇಕ ಗುಣ ವೃದ್ಧಿಸಿರುವುದರಿಂದ ಅವರು ಹಸಿವೆಯಿಂದ ಕಂಗಾಲರಾಗುತ್ತಿಲ್ಲ ಮತ್ತು ಮರಣವನ್ನಪ್ಪುತ್ತಿಲ್ಲ. ಆದರೆ ಅವರಲ್ಲಿಯ ಅನೇಕರಿಗೆ ಪದಾರ್ಥಗಳನ್ನು ಖರೀದಿಸುವ ಸಾಮರ್ಥ್ಯವೇ ಇಲ್ಲವಾಗಿದೆ. ಸಾವಿರ ಕೋಟಿಗೂ ಹೆಚ್ಚು ಸಂಖ್ಯೆಯ ಜನರ ಒಂದು ದಿನದ ಆದಾಯ ಒಂದು ಡಾಲರ್‌ಗೂ ಕಡಿಮೆ ಇದೆ. ಇದರ ಬಗ್ಗೆ ದುಃಖಿತರಾಗದೇ ಇರುವವರು ಹೇಳುವುದೇನೆಂದರೆ ಅತ್ಯಂತ ಬಡವನೂ ದೂರ ದೇಶದಲ್ಲಿ ನಡೆಯುವ ಫುಟಬಾಲ್ ಮ್ಯಾಚನ್ನು ನೋಡಬಲ್ಲವನಾಗಿದ್ದಾನೆ!

ಜೀವನೋಪಯೋಗಿ ಪದಾರ್ಥಗಳ ಬಳಕೆಯ ರೀತಿನೀತಿಗಳಲ್ಲಿ ಭೂಮ್ಯಾಕಾಶದಷ್ಟು ವ್ಯತ್ಯಾಸವಿದೆ. ಪ್ರಪಂಚದ ಅತಿ ಮುಂದುವರಿದ ದೇಶಗಳಲ್ಲಿ ಜಗತ್ತಿನ ಒಟ್ಟು ಜನಸಂಖ್ಯೆಯ ಶೇಕಡಾ ಇಪ್ಪತ್ತರಷ್ಟು ಮಾತ್ರ ಇದೆ. ಈ

ಜನಸಂಖ್ಯೆಗಳಾಗಿ ಜಗತ್ತಿನ ಎಲ್ಲ ಉತ್ಪಾದನೆ ಮತ್ತು ಸೇವೆಗಳ ಶೇಕಡಾ ೮೦ ರಷ್ಟು ಖರ್ಚಾಗುತ್ತಿದೆ. ಅಭಿವೃದ್ಧಿ ಹೊಂದುತ್ತಿರುವ ದೇಶಗಳಲ್ಲಿಯ ಶ್ರೀಮಂತರ ಜೀವನ ವಿಧಾನವು ಶ್ರೀಮಂತ ದೇಶದ ಶ್ರೀಮಂತರ ಜೀವನ ದಂತೆಯೇ ಇದೆ. ಇಂಥ ವಿಪರೀತ ಅಸಮಾನತೆ ಉಂಟಾಗಿರುವುದು ವಿಜ್ಞಾನದ ಅಸಂಗತ ಉಪಯೋಗದಿಂದಲ್ಲವೆ?

ಆ ಪ್ರಬಂಧದ ಲೇಖಕರು ನನ್ನ ಅಭಿಪ್ರಾಯದಲ್ಲಿ ಉತ್ತರ ಅಮೇರಿಕಾ ಮತ್ತು ಬಿಳಿಯರ ಇತರೆ ದೇಶಗಳು ಹಾಗೂ ಜಪಾನನ್ನು ಗಮನದಲ್ಲಿರಿಸಿ ಕೊಂಡಿದ್ದಾರೆ. ಪ್ರಪಂಚದ ವಿವಿಧ ಭಾಗಗಳಲ್ಲಿಯ ಜನರ ಆಶಾತ್ತೋರಗಳು ಸಮಾಧಾನಕರವಾಗಿ ಸಮತೋಲಕವಾಗಿವೆಯೆಂದು ಭಾವಿಸಿ ಅವರು ಇಂದಿನ ಪರಿಸ್ಥಿತಿಯನ್ನೇ ಕಾಪಾಡಿಕೊಂಡು ಹೋಗಬೇಕೆಂಬ ಸಲಹೆ ಕೊಡುತ್ತಿರುವಂತಿದೆ. ಈ ಯಥಾಸ್ಥಿತಿಯನ್ನೇ ಮುಂದುವರಿಸುವುದೆಂದರೆ ವಸಾಹತುಶಾಹಿಯ ಗುಣ ಧರ್ಮವಾದ ಅತಿಯಾದ ಅಸಮಾನತೆಯನ್ನೇ ಇಟ್ಟುಕೊಳ್ಳಬೇಕೆಂದು ವಾದ ಮಾಡಿದಂತಾಯಿತು,

ಸುಮಾರು ೨೦೦ ವರ್ಷಗಳ ಹಿಂದೆ ಯುರೋಪನಲ್ಲಿಯ ಆದಾಯದ ಮಟ್ಟಕ್ಕೂ ಮತ್ತು ಅದೇ ಸಮಯದಲ್ಲಿ ಭಾರತ ಮತ್ತು ಚೀಣಾದಲ್ಲಿದ್ದ ಆದಾಯದ ಮಟ್ಟಕ್ಕೂ ಅನುಪಾತ ೧.೫ ರಿಂದ ೨.೦ ಇದ್ದಿರಬಹುದು. ಯುರೋಪಿನಲ್ಲಿ ಕೈಗಾರಿಕಾ ಕ್ರಾಂತಿ ಪ್ರಾರಂಭವಾದ ಮೇಲೆ ಮೊದಲಿದ್ದ ಕೈಗಳಾಧಾರಿತ ಉದ್ಯೋಗಗಳು ನಾಶವಾದವು. ಬಹಳಷ್ಟು ಜನರು ತಮ್ಮ ಜೀವಿಕೆಯ ಮಾರ್ಗವನ್ನು ಕಳೆದುಕೊಂಡರು. ಈ ವಿಜ್ಞಾನ ಮತ್ತು ತಂತ್ರಜ್ಞಾನ ಅವರ ಪರಂಪರಾಗತ ಜೀವನವಿಧಾನಗಳ ನಾಶಕ್ಕೆ ಕಾರಣವಾದವು.

ಆ ಪ್ರಬಂಧವು ಮಾನವನ ಪ್ರತಿಕೃತಿಯ ಸೃಷ್ಟಿ ಮತ್ತು ಈಗಿನ ಸಾಧಾರಣ ಮನುಷ್ಯರಿಗಿಂತಲೂ ಶ್ರೇಷ್ಠವಾದ ಮಾನವಕುಲದ ನಿರ್ಮಾಣದ ಸಾಧ್ಯತೆಯನ್ನು ಕುರಿತು ಸಹ ವಿಶ್ಲೇಷಿಸುತ್ತದೆ. ಪ್ರತಿಕೃತಿ ಸೃಷ್ಟಿಯಲ್ಲಿರ ಬಹುದಾದ ತೊಡಕುಗಳನ್ನು ಕುರಿತು ಯೋಚಿಸುವ ಮೊದಲು ನಾವು ಗಮನಿಸ ಬೇಕಾದುದು ಈ ಜಗತ್ತು ಈಗಾಗಲೇ ಎರಡು ವರ್ಗಗಳಲ್ಲಿ ಒಡೆದು ಹೋಗಿರು ವುದನ್ನು. ಒಂದು, ಶೋಷಿತ ವರ್ಗ; ಇನ್ನೊಂದು ಶೋಷಕ ವರ್ಗ, ಈ ಶೋಷಿತ ವರ್ಗಕ್ಕೆ ಸೇರಿದ ಬಹುಸಂಖ್ಯಾತ ಜನರು ಅಭಿವೃದ್ಧಿಶೀಲ ದೇಶ ಗಳಲ್ಲಿಯೇ ಇದ್ದಾರೆ ಮತ್ತು ಅವರು ವ್ಯವಸಾಯದಲ್ಲೂ, ಗಣಿಗಳಲ್ಲೂ, ಮರುಭೂಮಿಯಲ್ಲಿರುವ ಖನಿಜೆಣ್ಣೆ ಅಥವಾ ಅನಿಲದ ಬಾವಿಗಳಲ್ಲೂ, ಸಮುದ್ರದ

ಮೇಲೆ ಮೀನುಹಿಡಿಯುವ ಹಡಗುಗಳಲ್ಲೂ, ಶ್ರಮಿಸುತ್ತಿದ್ದಾರೆ. ಸಹ್ಯಕ್ಕಿಂತಲೂ ಈ ನತದೃಷ್ಟ ಜನರು ಬೆಚ್ಚನೆಯ ಮನೆ ಹಾಗೂ ಆಧುನಿಕ ಸೌಕರ್ಯಗಳಿಂದ ವಂಚಿತರಾಗಿದ್ದಾರೆ. ಆ ಪ್ರಬಂಧದ ಲೇಖಕರು ಮಾಹಿತಿ ತಂತ್ರಜ್ಞಾನದ ದುರುಪಯೋಗದ ಸಾಧ್ಯತೆಯ ಬಗ್ಗೆಯೂ ಮತ್ತು ಮುಂದುವರೆದ ದೇಶಗಳು ಯಾವ ರೀತಿ ಹೆಚ್ಚು ಅಪಾಯದ ಅಂಚಿನಲ್ಲಿವೆ ಎಂಬ ಬಗ್ಗೆಯೂ ವಿಸ್ತಾರವಾಗಿ ಬರೆದಿದ್ದಾರೆ. ನಿಃಸಂಶಯವಾಗಿಯೂ ಇದು ವಾಸ್ತವಿಕ ಅಪಾಯವೇ. ಸೈನ್ಯಾಧಾರಿತ ರಕ್ಷಣೆಯನ್ನು ರಚಿಸಿಕೊಳ್ಳುವುದಕ್ಕಿಂತ ಮಾಹಿತಿ ತಂತ್ರಜ್ಞಾನವನ್ನು ಬಡುಮೇಲು ಮಾಡುವುದು ಸುಲಭವೆಂದು ಬಲ್ಲ ಮೂಲಗಳಿಂದ ಗೊತ್ತಾಗುತ್ತಿದೆ.

ವಿಜ್ಞಾನ ಮತ್ತು ತಂತ್ರಜ್ಞಾನಗಳಿಂದ ಭೂತಕಾಲದಲ್ಲಾದ ಅಸಂಗತ ಉಪಯೋಗಕ್ಕೆ ಪ್ರಾಯಶ್ಚಿತ್ತವೇನೆಂದರೆ ಈಗಿರುವ ಪ್ರಪಂಚಜ್ಞಾನವನ್ನು ಸಮಾನತೆಗಾಗಿಯೂ ಮತ್ತು ಪರಸ್ಪರರಲ್ಲಿ ಹಂಚಿಕೊಳ್ಳುವುದಕ್ಕಾಗಿಯೂ ಉಪಯೋಗಿಸಿಕೊಳ್ಳುತ್ತ ಇಡೀ ಮಾನವಕುಲದ ಉದ್ಧಾರ ಮಾಡುವುದು ಅಥವಾ ಸರ್ವೋದಯವನ್ನು ಸಾಧಿಸುವುದೇ ಆಗಿದೆ. ಆದರೆ ಖೇದದ ಸಂಗತಿಯೇನೆಂದರೆ ವಿಶ್ವ ವಾಣಿಜ್ಯ ಸಂಸ್ಥೆಯು (ಡಬ್ಲ್ಯೂ. ಟಿ. ಒ.) ರಚಿಸಿರುವ ನಿಯಮಾವಳಿಗಳು ಅನ್ಯಾಯಪೂರ್ಣವಾಗಿವೆ. ಏಕೆಂದರೆ ಈಗಲೂ ಸಹ ಯಾರ ಪರಂಪರಾಗತ ಜ್ಞಾನವನ್ನು ಉಪಯೋಗಿಸಿಕೊಂಡು ಜೀವನ ನಡೆಸುತ್ತಿದ್ದಾರೋ ಅವರು ಅಮೇರಿಕಾ ಮತ್ತು ಯುರೋಪಿನಲ್ಲಿರುವ ಪೇಟೆಂಟುಗಳ ಹೋರಾಟದಲ್ಲಿ ತೊಡಗಿ ಬಹಳಷ್ಟು ಹಣವನ್ನು ವ್ಯಯ ಮಾಡಬೇಕಾಗುತ್ತಿದೆ. ಅಂಥ ಜ್ಞಾನದ ಭಂಡಾರವನ್ನು ಹೊಂದಿರುವ ಪುರಾತನ ಸಮಾಜಗಳು ಪೇಟೆಂಟು ಮತ್ತು ಕೃತಿಸ್ವಾಮ್ಯದಂಥ ವಿಚಾರಗಳಿಗೆ ಒಗ್ಗಿರುವುದಿಲ್ಲ. ಈ ಸಮಸ್ಯೆಯ- ರಕ್ಷಾಪುಟಕ್ಕೆ

೨೭ ನೇ ಪುಟದಿಂದ ಮುಂದುವರಿದುದು

ನಿರ್ಮಾಣಗಾರನಾಗಬೇಕು."

ಇಂದ್ರಿಯಾನುಭವ ಮತ್ತು ನಿರ್ಮಾಣಕಾರ್ಯಗಳ ಮೂಲಕ ಶಿಕ್ಷಣ ನಡೆಯಬೇಕು. ಈ ಹೊಸ ವಿಚಾರವು ಶಿಕ್ಷಣವನ್ನು ವೈಜ್ಞಾನಿಕ ಮತ್ತು ಫಲಕಾರಿ ಆಗಿಸೀತು. ಅಷ್ಟೇ ಅಲ್ಲ, ಹಿಂದೆ ಎಂದೂ ಪ್ರಯತ್ನಮಾಡದಿದ್ದ ಅಂಗಹೀನರ, ಕುರುಡು ಮೂಗರ, ಕಿವುಡರ ಶಿಕ್ಷಣಕ್ಕೆ ದಾರಿಮಾಡೀತು. ಕೈಗೆಲಸದಿಂದ ಅಂಗಹೀನರಿಗೆ ಆರ್ಥಿಕ ಸ್ವಾತಂತ್ರ್ಯ ಲಭಿಸೀತು; ಅದರಿಂದ ಆತ್ಮಗೌರವ, ಆತ್ಮಾವಲಂಬನೆ. ಎಳೆತನದಲ್ಲಿ ಅಡ್ಡಹಾದಿ ಹಿಡಿದ ಹುಡುಗರನ್ನು ದಾರಿಗೆ ತರಲು ಕೂಡ ಇದರಿಂದ ಸಾಧ್ಯವಾದೀತು. (ಮುಂದುವರಿಯುವುದು)

ಇನ್ನೊಂದು ಮುಖ ಏನೆಂದರೆ ತಮ್ಮ ಪರಂಪರಾಗತ ಜೀವನದಿಂದ ಯುವಕರು ವಿಮುಖರಾಗುವಂತೆ ಮಾಡುತ್ತಿದೆ ವಿಶ್ವೀಕರಣ. ಹಳೆಯದರ ಬದಲು ಹೊಸದು ಅವರಿಗೆ ಸಿಗುತ್ತಿಲ್ಲ. ದೂರದರ್ಶನದ ಮೂಲಕ ಜಗತ್ತಿಗೆಲ್ಲ ಒಂದೇ ಗುಣಮಟ್ಟದ ಸಂಸ್ಕೃತಿಯು ನಿರ್ಮಾಣವಾಗುತ್ತಿದೆ. ಇದು ಪೂರ್ವಯೋಜಿತವಾಗಿರದೇ ಇರಬಹುದು. ಆದರೆ ಈ ರೀತಿಯ ಏಕಪ್ರಕಾರದ ವಿಶ್ವವ್ಯಾಪಿ ಸಂಸ್ಕೃತಿಯಿಂದ ಅಪಾರ ನಷ್ಟವೇ ಆದೀತು. ಸಾಮಾನ್ಯವಾಗಿ ಜನರು, ಅದರಲ್ಲಿಯೂ ದೀರ್ಘ ಇತಿಹಾಸವುಳ್ಳ ಜನರು, ತಮ್ಮ ಮೂಲೋತ್ಪಾಟನೆಯಾಗುವುದನ್ನು ಇಷ್ಟಪಡುವುದಿಲ್ಲ.

ಕೊನೆಯದಾಗಿ ಆ ಪ್ರಬಂಧದ ಲೇಖಕರು ಸಧ್ಯಕ್ಕಂತೂ ವಿಶ್ವ ಸರ್ಕಾರದ ರಚನೆಗಾಗಿ ಇನ್ನೂ ಬಹಳಷ್ಟು ಸಮಯ ಬೇಕೆಂದು ಹೇಳುತ್ತಾ, ವಿಜ್ಞಾನಿಗಳು ನೀತಿ, ದಯೆ ಮತ್ತು ಮಾನವೀಯತೆಯಂಥ ಮೌಲ್ಯಗಳನ್ನು ಒಳಗೊಂಡಂತೆ ಜೀವನದ ಬಗ್ಗೆ ವಿಶಾಲ ದೃಷ್ಟಿಯನ್ನು ಹೊಂದಬೇಕೆಂದು ತಿಳಿಸುತ್ತಾರೆ. ಜ್ಞಾನಿಗಳು ತಮ್ಮ ದಂತಗೋಪುರದಿಂದ ಕೆಳಗೆ ಬಂದು ಧಾರ್ಮಿಕ ಮುಖಂಡರು, ಲೇಖಕರು, ವ್ಯಾಪಾರೋದ್ಯಮಿಗಳು ಮತ್ತು ಸಾಮಾನ್ಯ ಜನತೆಯೊಂದಿಗೆ ಕಲೆಯಬೇಕು; ಅವರು ನಾಗರಿಕ ಮತ್ತು ಸಾಮಾಜಿಕ ವ್ಯವಹಾರಗಳಲ್ಲಿ ಸಕ್ರಿಯ ಆಸಕ್ತಿ ವಹಿಸಬೇಕು ಎಂದು ಸೂಚಿಸುತ್ತಾರೆ. ವಿಜ್ಞಾನಿಗಳು ತಮ್ಮ ಇಡೀ ಜಾಗೃತಾವಸ್ಥೆಯನ್ನೆಲ್ಲ ಪ್ರಯೋಗಾಲಯಗಳಲ್ಲಿಯೇ ಕಳೆಯುತ್ತಿದ್ದಂಥ ಕ್ರಮ ನೂರು ವರ್ಷಗಳ ಹಿಂದಿನ ಕಾಲಕ್ಕೆ ಸರಿಯಿದ್ದಿರಬಹುದು. ಆದರೆ ಇಂದಿನ ಕಾಲದಲ್ಲಿ ಒಬ್ಬ ವಿಜ್ಞಾನಿಗೆ ಅವನ ನಾಗರೀಕತೆಯ ಹೊಣೆಗಾರಿಕೆಗಳೂ ಇವೆ, ಇವುಗಳನ್ನು ಅವನು ಆತ್ಮಸಾಕ್ಷಿಯಾಗಿ ನಿರ್ವಹಿಸಬೇಕಾಗಿದೆ.

(ಹಿಂದೂ ಸಾಭಾರ ಅನು : ಸುಕೌ)



ಮುದ್ರಿತ ಪುಸ್ತಕ

ತೆರೆದ–ಅಂಚೆ

To

ಜನಪದ ಸೇವಾ ಟ್ರಸ್ಟ್ ಪರವಾಗಿ ಸುರೇಂದ್ರ ಕೌಲಗಿ ಅವರಿಂದ ಜನಪದ ಸೇವಾ ಟ್ರಸ್ಟ್ ಮುದ್ರಣಾಲಯ ಮೇಲುಕೋಟೆಯಲ್ಲಿ ಸಂಪಾದಿತವಾಗಿ, ಮುದ್ರಿತವಾಗಿ ಪ್ರಕಟಿಸಲ್ಪಟ್ಟಿತು.